ಉಪನ್ಯಾಸ ಗ್ರಂಥಮಾಲೆ

೩೭೮

# ಕೊಂಡಗುಳಿ ಕೇಶಿರಾಜ

ಎಂ. ಎಂ. ಪಡಶೆಟ್ಟಿ

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

ಸಪ್ಟಂಬರ, ೧೯೮೬

ಉಪನ್ಯಾಸ ಗ್ರಂಥಮಾಲೆ

೩೭೮

# ಕೊಂಡಗುಳಿ ಕೇಶಿರಾಜ

ಎಂ. ಎಂ. ಪಡಶೆಟ್ಟಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಪ್ಟಂಬರ, ೧೯೮೬

ಪ್ರಕಾಶಕರು :

**ಎಸ್. ಬಿ. ನಾಯಕ**

ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು

ಸಪ್ಟೆಂಬರ, ೧೯೮೬



ಬೆಲೆ : ೫೦ ಪೈಸೆ

ಮುದ್ರಕರು :

ರಾಜಶ್ರೀ ಪ್ರಿಂಟಿಂಗ ಪ್ರೆಸ್

ತಡಕೋಡ ಗಲ್ಲಿ

ಧಾರವಾಡ

# ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿದೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ

ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವ ದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೭೭ ಪುಸ್ತಿಕೆಗಳು ಪ್ರಕಟ ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿ ರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು – ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋ ಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ಜಿ. ದೇಸಾಯಿ
ಕುಲಪತಿಗಳು

# ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗವು ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಮೋರಟಗಿ ಗ್ರಾಮದಲ್ಲಿ ದಿ. ೨೮–೮–೧೯೮೧ ರಂದು ಏರ್ಪಡಿಸಿದ ಉಪನ್ಯಾಸ ಶಿಬಿರದಲ್ಲಿ ನಾನು 'ಕೊಂಡಗುಳಿ ಕೇಶಿರಾಜ' ಎಂಬ ವಿಷಯ ಕುರಿತು ಉಪನ್ಯಾಸ ನೀಡಿದೆನು. ಅದರ ವಿಸ್ತೃತರೂಪವೇ ಈ ಚಿಕ್ಕ ಪುಸ್ತಕ.

ಉಪನ್ಯಾಸ ನೀಡಲು ಅವಕಾಶ ಒದಗಿಸಿದ ಅಂದಿನ ನಿರ್ದೇಶಕರಿಗೂ, ಪುಸ್ತಕ ಪ್ರಕಟನೆಯಲ್ಲಿ ಆಸಕ್ತಿ ತೋರಿದ ಇಂದಿನ ನಿರ್ದೇಶಕರಿಗೂ ಉಪಕೃತನಾಗಿದ್ದೇನೆ. ಶಿಬಿರದಲ್ಲಿ ಸ್ನೇಹ–ಸೌಹಾರ್ದತೆಗಳನ್ನು ಮೆರೆದ ಶ್ರೀ ಎಲ್. ಎಂ. ಗುಡ್ಡೀನ ಅವರಿಗೂ ಕೃತಜ್ಞತೆ ಸಲ್ಲಬೇಕು.

ವೀರಶೈವ ಮೊದಲು ಕವಿಯಾದ 'ಕೊಂಡಗುಳಿ ಕೇಶಿರಾಜ' ವಿಷಯ ಕುರಿತು ಉಪನ್ಯಾಸ ಸಿದ್ಧಪಡಿಸಿಕೊಳ್ಳುವಲ್ಲಿ, ಅದನ್ನು ಬರವಣಿಗೆಗೆ ಅಳವಡಿಸಿಕೊಳ್ಳುವಲ್ಲಿ ಕೈಹಿಡಿದು ನಡೆಸಿದ ನನ್ನ ವಿದ್ಯಾಗುರು ಡಾ॥ ಎಂ. ಎಂ. ಕಲಬುರ್ಗಿಯವರಿಗೂ ಹಾಗೂ ಸಲಹೆ–ಸೂಚನೆಯಿತ್ತ ಡಾ॥ ಬಿ. ಆರ್. ಹಿರೇಮಠ ಅವರಿಗೂ ನನ್ನ ವಂದನೆಗಳು. ಮೋರಟಗಿ ಗ್ರಾಮದ ವಿರಕ್ತಮಠದ ಸ್ವಾಮಿಗಳಾದ ಪೂಜ್ಯ ಸಿದ್ಧಲಿಂಗ ಮಹಾಸ್ವಾಮಿಗಳ ಸಾಹಿತ್ಯಪ್ರೇಮ, ಅವರ ಪ್ರಸಾದ ಹಸ್ತ ಅಂದಿನ ಶಿಬಿರಾರ್ಥಿಗಳೆಲ್ಲರ ಮೇಲೂ ಪ್ರಭಾವ ಬೀರಿತು. ಆ

ಪೂಜ್ಯರಿಗೆ ಶರಣು ಸಮರ್ಪಣೆಗಳು. ಕೊನೆಗೆ ಮೋರಟಗಿ ಜನರ ಉತ್ಸಾಹ ಜೊತೆಗೆ ಅಲ್ಲಿನ ಹೈಸ್ಕೂಲ ಮುಖ್ಯಾಧ್ಯಾಪಕ ರಾದ ಶ್ರೀ ಜಿ. ಬಿ. ಬ್ಯಾಕೋಡ ಗುರುಗಳನ್ನು ಇಲ್ಲಿ ಸ್ಮರಿಸ ದಿರಲಾರೆ.

ಪೋರವಾಲ ಕಾಲೇಜ
ಸಿಂದಗಿ (ವಿಜಾಪುರ)

ಎಂ. ಎಂ. ಪಡಶೆಟ್ಟಿ

# ಪರಿವಿಡಿ

# ಪೀಠಿಕೆ

'ವಚಶ್ರೀ ವಧೂಕಾನ್ತ ಸಾಹಿತ್ಯ ಸರೋರುಹಮಧು ಬ್ರತ'ನೆಂದು ಶಾಸನಗಳಲ್ಲಿ ವರ್ಣಿತನಾಗಿರುವ ಕೊಂಡಗುಳಿ ಕೇಶಿರಾಜ ಕನ್ನಡ ನಾಡಿನ ಧಾರ್ಮಿಕ ಹಾಗೂ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವನ್ನಲಂಕರಿಸಿದ್ದಾನೆ. 'ಆದ್ಯ' ವಚನಕಾರರಲ್ಲೊಬ್ಬನಾದ ಜೇಡರದಾಸಿಮಯ್ಯ (ಸು. ಕ್ರಿ. ಶ. ೧೧೪೦) ಹಾಗೂ ಹರಿಹರನಿಂದ ಷಡಕ್ಷರದೇವನವರೆಗಿನ ವೀರಶೈವ ಕವಿಗಳು ಈತನ ಸ್ಮರಣೆ ಹಾಗೂ ಈತನನ್ನು ಕುರಿತ ಕೃತಿ ರಚನೆ ಮಾಡಿದ್ದಾರೆ. ಆಧುನಿಕ ಪಂಡಿತರಾದ ಕವಿಚರಿತೆಕಾರರು ಮೊದಲುಗೊಂಡು ಹಲವು ವಿದ್ವಾಂಸರ ವಿವೇಚನೆಗೊಳಗಾಗಿ ಸದ್ಯ ಡಾ॥ ಎಂ. ಎಂ. ಕಲಬುರ್ಗಿಯವರು ಸಂಪಾದಿಸಿರುವ 'ಕೊಂಡಗುಳಿ ಕೇಶಿರಾಜನ ಕೃತಿಗಳು' ಎಂಬ ಗ್ರಂಥದಿಂದಾಗಿ ಈತನು ವ್ಯವಸ್ಥಿತ ಅಧ್ಯಯನಕ್ಕೊಳಗಾಗಿದ್ದಾನೆ. ಹೀಗೆ ಪ್ರಾಚೀನ ಹಾಗೂ ಅರ್ವಾಚೀನ ಪಂಡಿತರಿಂದ ಅಭ್ಯಾಸಯೋಗ್ಯನಾದುದನ್ನು ಗಮನಿಸಿದಾಗ ಕೊಂಡಗುಳಿ ಕೇಶಿರಾಜನ ಘನ ವ್ಯಕ್ತಿತ್ವದ ಅರಿವು ನಮಗಾಗದೇ ಇರದು.

ಬಸವಯುಗದ ಆಂದೋಲನಕ್ಕೆ ನಾಂದಿಯಾಗಿ, ಮುಂಬೆಳಕಾಗಿ ಕೆಲವು ಶರಣರು ಬಸವಪೂರ್ವದಲ್ಲಿಯೇ ಎದ್ದು ಕಾಣುತ್ತಾರೆ. ಇವರನ್ನು ಬಸವಪೂರ್ವಯುಗದ ಶರಣರೆಂದು ನಿರ್ದೇಶಿಸಲಾಗುತ್ತದೆ. ಪ್ರಮಥರಲ್ಲಿ ಪ್ರಮುಖರಾದ ಬಸವಣ್ಣನವರು ತಮ್ಮ ಪೂರ್ವದ ಶರಣರಿಗೆ 'ಆದ್ಯರು' ಎಂದೇ ನಿರ್ದೇಶಿಸಿದ್ದಾರೆ.

ಆದ್ಯರ ವಚನ ಪರುಷ ಕಂಡಣ್ಣಾ;
ಸದಾಶಿವನೆಂಬ ಲಿಂಗವ ನೆಱೆನಂಬುವುದು;
ನಂಬಲೊಡನೆ ನೀ ವಿಜಯಿ; ಕಂಡಣ್ಣಾ
ಅಧರಕ್ಕೆ ಕಹಿ, ಉದರಕ್ಕೆ ಸಿಹಿ.
ಕೂಡಲಸಂಗನ ಶರಣರ ವಚನ ಬೇವ ಸವಿದಂತೆ.

ಹಾಲತೊಱೆಗೆ ಬೆಲ್ಲದ ಕೆಸಱು ಸಕ್ಕರೆಯು ಮಳಲು
ತವರಾಜದ ನೊರೆ ತೆರೆಯಂತೆ
ಆದ್ಯರ ವಚನವಿರಲು ಬೇರೆ ಬಾವಿಯ ತೋಡಿ
ಉಪ್ಪನೀರನುಂಬವನ ವಿಧಿಯಂತೆ
ಆಯಿತೆನ್ನ ಮತಿ ಕೂಡಲಸಂಗಮದೇವಾ.

ಈ ಆದ್ಯರಿಂದ ವಿಪುಲವಾದ ವಚನ ರಚನೆಯಾಗಿತ್ತೆಂಬುದು ಮೇಲಿನ ಬಸವಣ್ಣನವರ ತುಲನಾತ್ಮಕ ವಚನಗಳಿಂದ ಸ್ಪಷ್ಟವಾಗುತ್ತದೆ. ಆದ್ಯರ ವಚನಗಳ ಮಹತ್ವಗಳನ್ನು ಕಂಡುಕೊಂಡ ಬಸವಣ್ಣನವರು ಅವರ ಹೆಸರನ್ನೂ ಸ್ಮರಿಸಿಕೊಂಡಿದ್ದಾರೆ.

ತೊತ್ತಿಂಗೆ ಬಲ್ಲಹನೊಲಿದರೆ ಪದವಿಯ ಮಾಡದೆ
ಮಾಣ್ಬನೆ ?
ಜೇಡರದಾಸಯ್ಯಂಗೊಲಿದಾತ ಮತ್ತೊಬ್ಬ
ದೇವನೇ ಅಯ್ಯಾ ?
ಮಾದರ ಚನ್ನಯ್ಯಂಗೆ, ಡೋಹರ ಕಕ್ಕಯ್ಯಂಗೆ,
ತೆಲುಗು ಜೊಮ್ಮಯ್ಯಂಗೆ ಒಲಿದಾತ ಮತ್ತೊಬ್ಬ
ದೇವನೇ ಅಯ್ಯಾ ?

ಎನ್ನ ಮನದ ಪಂಚೇಂದ್ರಿಯ ನಿಮ್ಮತ್ತಲಾದರೆ
ತನ್ನತ್ತ ಮಾಡುವ ಕೂಡಲಸಂಗಯ್ಯ.

ದಾಸನ ವಸ್ತ್ರವ ಬೇಡದ ಮುನ್ನ
ತವನಿಧಿಯನಿತ್ತರೆ ನಿಮ್ಮ ದೇವರೆಂದೆಂಬೆ!
ಸಿರಿಯಾಳನ ಮಗನ ಬೇಡದ ಮುನ್ನ
ಕಂಚಿಯ ಪುರವ ಕೈಲಾಸಕ್ಕೊಯ್ದಿದರೆ
ನಿಮ್ಮ ದೇವರೆಂದೆಂಬೆ!

ಬಲ್ಲಾಳನ ವಧುವ ಬೇಡದ ಮುನ್ನ ಸ್ವಯಲಿಂಗವಾದರೆ
ನಿಮ್ಮ ದೇವರೆಂದೆಂಬೆ!
ದೇಹಿ ನೀನು, ವ್ಯಾಪಾರಿಗಳು ನಮ್ಮವರು;
ಬೇಡು ಕೂಡಲಸಂಗಮದೇವಾ, ನಮ್ಮವರ ಕೈಯಲು!

ಮುಂತಾದ ವಚನಗಳಲ್ಲಿ ಬಸವಪೂರ್ವದ, ಹಿರಿಯಸಮಕಾಲೀನ ಹಾಗೂ ಸಮಕಾಲೀನ ಶರಣರ ಹೆಸರನ್ನು ಕಾಣುತ್ತೇವೆ. ಆದರೆ ಇವರೆಲ್ಲರೂ ಬದುಕಿದ ಕಾಲದ ನಿರ್ಣಯವಾಗಿಲ್ಲ. ವಿದ್ವಾಂಸರಲ್ಲಿ ಚರ್ಚೆ ನಡೆದಿದೆ, ಇನ್ನೂ ಒಮ್ಮತಕ್ಕೆ ಬರಬೇಕಾಗಿದೆ, ಜೊತೆಗೆ ಕೆಲವರ ಹೆಸರಿನ ತೊಡಕೂ ಉಂಟು. ಬಸವಪೂರ್ವದ ಪಥಕ್ಕೆ ದಿಕ್ಸೂಚಿಯಾಗಿ ನಿಲ್ಲಬಲ್ಲ ಜೇಡರದಾಸಿಮಯ್ಯನ ಕುರಿತೇ ಈ ತೊಡಕುಂಟಾದುದರಿಂದ ಇದುವರೆಗೂ ವಿದ್ವಾಂಸರಲ್ಲಿ ವಿಪುಲವಾದ ಚರ್ಚೆ ನಡೆದಿದೆ. ದೇವರ/ಜೇಡರದಾಸಿಮಯ್ಯ ಭಿನ್ನರೋ? ಅಭಿನ್ನರೋ? ಭಿನ್ನರಾದರೆ ಅವರ ಕಾಲ ಯಾವುದು ? ಎಂಬ ಚರ್ಚೆನಡೆದು ಸದ್ಯ ಒಂದು ಒಮ್ಮತಕ್ಕೆ ಬಂದಂತಿದೆ. "ಹರಿಹರ", 'ಜೇಡರದಾಸಿಮಯ್ಯ'ನೊಂದಿಗೆ,

ಪಾಲ್ಕುರಿಕೆಸೋಮ 'ದೇವರದಾಸಿಮಯ್ಯ'ನೊಂದಿಗೆ "ರಾಮನಾಥ" ದೇವರ ಸಂಬಂಧ ಕಲ್ಪಿಸಿದ್ದಾರೆ. ಹೀಗಾಗಿ ಇಬ್ಬರೂ ಒಬ್ಬನೇ ಇದ್ದು ಆಂಧ್ರ ಪ್ರದೇಶದ ಕಡೆಗೆ ದೇವರ ದಾಸಿಮಯ್ಯ ನಾಮ—ಘಟಸರ್ಪ ಪವಾಡ, ಕರ್ನಾಟಕದ ಕಡೆಗೆ ಜೇಡರದಾಸಿಮಯ್ಯ ನಾಮ — ತವನಿಧಿ ಪವಾಡಗಳು ಪ್ರಚಾರಕ್ಕೆ ಬಂದುಬಿಟ್ಟವೇ ? ಎಂಬ ಸಂದೇಹವೂ ಮೂಡುತ್ತದೆ. ಇದನ್ನು ನಂಬಿ ಸುಗ್ಗಲೆಯ ಪತಿ ಜಯಸಿಂಹ (ಕ್ರಿ.ಶ. ೧೦೧೮–೪೧) ರಷ್ಟು ಈತನನ್ನು ಹಿಂದೆ ಒಯ್ದರೆ ಈತನ ಗುರು ಶಂಕರ ದಾಸಿಮಯ್ಯ ಬಸವಾದಿಗಳನ್ನು ಹೇಗೆ ನೆನೆದಾ "[೧] ಎಂಬ ಡಾ। ಕಲಬುರ್ಗಿಯವರ ಸಂದೇಹ ಸತ್ಯವಾಗುತ್ತದೆ. ಇದನ್ನು ರಾಜಕೀಯ ಇತಿಹಾಸದ ಹಿನ್ನೆಲೆಯಲ್ಲಿ ನೋಡಿದಾಗ ಅರಿಕೆಗೆ ಬರುತ್ತದೆ. ದೇವರದಾಸಿಮಯ್ಯನು ಪೊಟ್ಟಲಕೆರೆಯ ಜಯಸಿಂಹನ (ಕ್ರಿ.ಶ. ೧೦೧೫–೪೧) ಕಾಲದವನಾಗಿದ್ದು, ಈ ಅರಸನ ರಾಣಿಯಾದ ಸುಗ್ಗಲೆಗೆ ದೀಕ್ಷೆಯನ್ನಿತ್ತವನು; ಘಟಸರ್ಪದ ಪವಾಡ ಮೆರೆದವನು. ಇನ್ನು ತವನಿಧಿ ಪವಾಡ ಮೆರೆದ ಜೇಡರ ದಾಸಿಮಯ್ಯನು ದುಗ್ಗಳೆಯ ಗಂಡನು. ಬಸವಣ್ಣನವರ ಹಿರಿಯ ಸಮಕಾಲೀನರಾದ ಶಂಕರದಾಸಿಮಯ್ಯನಿಂದ ಅಹಂಕಾರವನ್ನು ಕಳೆದುಕೊಂಡವನು. ಕ್ರಿ. ಶ. ೧೦೭೬–೧೧೨೭ ರ ವರೆಗೂ ಆಳಿದ ೬ನೇ ವಿಕ್ರಮಾದಿತ್ಯನಲ್ಲಿ ದಂಡಾಧೀಶನಾಗಿದ್ದ ಕೊಂಡಗುಳಿ ಕೇಶಿರಾಜನನ್ನು ಕುರಿತ ಕತೆಯೊಂದನ್ನು, ತನ್ನ ಒಂದು ವಚನದಲ್ಲಿ ಸೂಚಿಸಿರುತ್ತಾನೆ. ಈ ಹಿನ್ನೆಲೆಯಲ್ಲಿಯೇ ಡಾ ಎಂ. ಚಿದಾನಂದಮೂರ್ತಿಯವರೂ ಸಹ "ನಮಗೆ ದೊರೆತಿರುವ ಆಧಾರಗಳ ಸಹಾಯದಿಂದ ಹೇಳುವದಾದರೆ ಜೇಡರದಾಸಿಮಯ್ಯನೇ ಮೊದಲ ವಚನಕಾರ. ಇವನು ಸುಮಾರು ಕ್ರಿ. ಶ.

೧೦೪೦ರಲ್ಲಿದ್ದ ದೇವರದಾಸಿಮಯ್ಯನಿಗಿಂತ ಭಿನ್ನ. ದೇವರ ದಾಸಿಮಯ್ಯ ಶಿವಭಕ್ತನಾದರೂ ಅವನು ವಚನಗಳನ್ನು ಬರೆದಂತೆ ತೋರುವುದಿಲ್ಲ. ಆದರೆ ಅವನಾದ ಬಳಿಕ ನೂರುವರ್ಷಗಳ ಅಂತರದಲ್ಲಿ, ಎಂದರೆ ಸುಮಾರು ಕ್ರಿ. ಶ. ೧೧೪೦ರಲ್ಲಿದ್ದ ಜೇಡರ ದಾಸಿಮಯ್ಯನೇ 'ರಾಮನಾಥ' ಅಂಕಿತ ಪಡೆದಿರುವ ವಚನಗಳ ಕರ್ತೃ. ಇವನು ಬಸವಣ್ಣನಿಗಿಂತ ಹಿಂದಿನವನು ಮತ್ತು ಹಿರಿಯ ಸಮಕಾಲೀನ"ನು[೨] ಎಂಬ ಅಭಿಪ್ರಾಯವನ್ನು ಗಮನಿಸಿದಾಗ ವಿದ್ವಾಂಸರಲ್ಲಿ ಏಕಾಭಿಪ್ರಾಯ ಮೂಡಿದ್ದು ವೇದ್ಯವಾಗುತ್ತದೆ.

ತವನಿಧಿಯ ಪವಾಡವನ್ನು ಮೆರೆದ, ಆದ್ಯರಲ್ಲೊಬ್ಬರಾದ ಜೇಡರದಾಸಿಮಯ್ಯನ ನೂರೈವತ್ತು ವಚನಗಳು ಇದುವರೆಗೆ ದೊರಕಿವೆ. ಕೆಲವು ವಚನಗಳಲ್ಲಿ ತನ್ನ ಸಮಕಾಲೀನರ ಹೆಸರನ್ನು ಹೆಸರಿಸುತ್ತಾನೆ.

ನಂಬಿದ ಚನ್ನನ ಅಂಬಲಿಯನುಂಡ
ಕೆಂಭಾವಿಭೋಗಣ್ಣನ ಹಿಂದಾಡಿ ಹೋದ
ಗುಂಡಯ್ಯನ ಕುಂಭದ ಗತಿಗೆ ಕುಕಿಲಿರಿಂದು ಕುಣಿದ
ನಂಬದೆ ಕರೆದವರ ಹಂಬಲನೊಲ್ಲ ನಮ್ಮ ರಾಮನಾಥ.

ನೆಱೆನಂಬಿ ಕರೆದಡೆ ನರಿ ಕುದುರೆಯಾಗಿ ಹರಿಯವೆ ?
ಜಗವೆಲ್ಲರಿಯಲು ತೊರೆಯೊಳಗೆ ಬಿದ್ದ ಲಿಂಗ
ಕರೆದರೆ ಬಂದುದು ಕರಸ್ಥಲಕ್ಕೆ
ನಂಬದೆ ಕರೆದವರ ಹಂಬನೊಲ್ಲನೆಮ್ಮ ರಾಮನಾಥ.

ಈ ವಚನಗಳಲ್ಲಿ ಹೇಳಿದ ಸಮಕಾಲೀನರ ಸಾಲಿನಲ್ಲಿ 'ತೊಱೆ ಯೊಳಗೆ ಬಿದ್ದ ಲಿಂಗ ಕರೆದರೆ ಬಂದುದು ಕರಸ್ಥಲಕ್ಕೆ' ಈ ಪವಾಡ ಮೆರೆದ ಕೊಂಡಗುಳಿ ಕೇಶಿರಾಜ ನಿಲ್ಲುತ್ತಾನೆ. ಈತನು ಶಾಸನೋಕ್ತ ಶಿವಶರಣರಲ್ಲಿ ಅಗ್ರಗಣ್ಯನಾಗಿ, ಕನ್ನಡದ ವೀರಶೈವ ಕವಿಗಳಲ್ಲಿ ಮೊದಲಿಗನಾಗಿ, ಕಲ್ಯಾಣ ಚಾಲುಕ್ಯ ಚಕ್ರವರ್ತಿ ೬ನೇ ವಿಕ್ರಮಾದಿತ್ಯನ ದಂಡಾಧೀಶನಾಗಿ ಕನ್ನಡನಾಡಿನ ಧಾರ್ಮಿಕ, ಸಾಹಿತ್ಯಿಕ ಹಾಗೂ ರಾಜಕೀಯ ಇತಿಹಾಸದಲ್ಲಿ ದೊಡ್ಡ ಹೆಸರು ಗಳಿಸಿಕೊಂಡಿದ್ದಾನೆ.

## ಚರಿತ್ರೆ

ಒಬ್ಬ ಐತಿಹಾಸಿಕ ಪುರುಷನ ಚರಿತ್ರೆಯನ್ನು ಹೆಣೆಯು ವಲ್ಲಿ ಸಹಾಯಕವಾಗಿರುವ ಸಾಧನ ಸಾಮಗ್ರಿಗಳೆಂದರೆ ಆತನ ಸಾಹಿತ್ಯ ಕೃತಿಗಳು, ಅವನ ಕುರಿತು ಹುಟ್ಟಿಕೊಂಡ ಶಾಸನಗಳು ಹಾಗೂ ಇತರ ಕವಿಗಳ ಕೃತಿಗಳು. ಇವುಗಳ ಆಧಾರದಿಂದ ಕೇಶಿ ರಾಜನ ಚರಿತ್ರೆಯನ್ನು ಹೀಗೆ ಅರಿತುಕೊಳ್ಳಬಹುದು.

ಕೇಶಿರಾಜನ ಊರು ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಡೋಣಿ ಕೊಂಡಗುಳಿ. ಕಲ್ಯಾಣ ಚಾಲುಕ್ಯರ ಕಾಲ ದಲ್ಲಿ ಈ ಊರು ಒಂದು ಅಗ್ರಹಾರವಾಗಿತ್ತು. ಹರಿಹರ ಕವಿ ಮತ್ತು ಕೊಂಡಗುಳಿಯ ಎರಡು ಶಾಸನಗಳು ಇದನ್ನು ಅಗ್ರ ಹಾರ ಎಂದೇ ಕರೆದಿವೆ. ಕೇಶಿರಾಜನನ್ನು ಕುರಿತ ಎರಡು ಶಾಸನ ಗಳು ಕೊಂಡಗುಳಿಯಲ್ಲಿ ದೊರಕಿವೆ. ಕ್ರಿ. ಶ. ೧೧೧೦ರ ಶಾಸನದ ಪ್ರಕಾರ ಕೇಶಿರಾಜನ ತಂದೆ ನಿಂಬಣಯ್ಯ ಕಲ್ಯಾಣ ಚಾಲುಕ್ಯರಲ್ಲಿ ದಂಡನಾಯಕ.

"............ವಾಜಿಕುಳಾಂ
ಬರದ್ಯುಮಣಿ ಬನ್ದು ಚಿನ್ತಾ[ಮ]ಣಿ ಶ್ರೀ
ಮತ್ರಿಭುವನಮಲ್ಲದೇವ ಪದಾರಾಧಕಂ ಪ....
ಕನಾಮಾದಿ ಸಮಸ್ತ ಪ್ರಶಸ್ತಿ ಸಹಿತ...
ಮನುಮಹಾಪ್ರಧಾನಂ ಮನೆವೆರ್ಗ್ಗಡೆ ದಂಡ...
ಬಣಯ್ಯಂಗಳ್."

ನಿಂಬಣ ದಂಡನಾಥನನ್ನು 'ವಾಜಿಕುಳಾಂಬರದ್ಯುಮಣಿ' ಎಂದು ಕರೆದ ಈ ಶಾಸನ ಮಗ ಕೇಶಿರಾಜನನ್ನು ಕುರಿತು

"...ಕೊಣ್ಡಂಗುಳಿಯುಲು ನಿಂಬ
....ಗಳ ಮಗ ಸ್ವಸ್ತಿ ಸಮಧಿಗತಪಞ್ಚ
ಮಹಾಶಬ್ದ ಮಹಾಸಾಮನ್ತಾಧಿಪತಿ (ಮ)
ಮಹಾಪ್ರಚಣ್ಡದಣ್ಡನಾಯಕ ದುಷ್ಟವಿದ್ವಿಷ್ಟ
ವಿಧೇಯುಕ ವಾಜಿಕುಳಾರ್ಣ್ನವ ಪಾರಿಜಾತ
ಸುಕವಿಶುಕಚೂಡ ಬನ್ಧುವನವಸನ್ತ ವಚಶ್ರೀವಧೂ
ಕಾನ್ತ ಸಾಹಿತ್ಯಸರೋರುಹಮಧುಬ್ರತ ಸತ್ಯಸ
ತ್ಯಬ್ರತ ಹರಚರಣ ರಜೋರಂಜಿತೋತ್ತಮಾಂಗನ
ಯ್ಯನಸಿಂಗ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ
ಶ್ರೀಮನ್ಮಹಾಪ್ರ
ಧಾನಂ ಹೇರಿಲಾಳ ಸನ್ಧಿವಿಗ್ರಹಿ ದಣ್ಣನಾ[ಯ]ಕಂ
ಕೇಸಿರಾಜರಸರು".

ಇಲ್ಲಿ 'ವಾಜಿಕುಳಾರ್ಣ್ನವ ಪಾರಿಜಾತ' ಎಂದು ಕರೆದಿರುವುದರಿಂದ ಇವರದು 'ವಾಜಿಕುಲ'ವೆಂಬುದು ಸ್ಪಷ್ಟವಾಗುತ್ತದೆ. ಈ

ಶಾಸನದಲ್ಲಿಯು ಕೇಶಿರಾಜನ ಕುರಿತಿರುವ ಒಕ್ಕಣಿಕೆ ಈತನ ರಾಜಕೀಯ ಹಾಗೂ ಸಾಹಿತ್ಯಕ ಕಾರ್ಯಕಲಾಪಗಳ ಮೇಲೆ ಹೆಚ್ಚಿನ ಬೆಳಕು ಚೆಲ್ಲುತ್ತದೆ. ಶಾಸನಗಳು ಹೇಳುವಂತೆ ಕೇಶಿರಾಜನು ಕಲ್ಯಾಣ ಚಾಲುಕ್ಯ ೬ನೇ ವಿಕ್ರಮಾದಿತ್ಯನಲ್ಲಿ ದಂಡನಾಯಕ. ಇದನ್ನು ಕವಿ ಹರಿಹರ ಹೀಗೆ ವಿವರಿಸುತ್ತಾನೆ.

"...ಅತ್ತಲಾ ಕಲ್ಯಾಣಪುರದೊಳಗೆ
ಧರಣೀಶ ಪೆರ್ಮಾಡಿರಾಯನೋಲಗದೊಳಗೆ
ಹರುಷದಿಂ ಸಿಂಹಾಸನಾರೂಢನಾಗಿರ್ದು
ಪರಿಪರಿಯ ಮಂತ್ರಿಗಳ ಮೊಗವನೀಕ್ಷಿಸುತಿರ್ದು
ತನ್ನಯ ಮನಕ್ಕೆರಗುವವರೊರ್ವರಿಲ್ಲದಿರೆ
ತನ್ನ ಚಿತ್ತಕ್ಕೆ ತಕ್ಕನುಕೂಲರಿಲ್ಲದಿರೆ
ಬಂದನೋಲಗದೊಳಗೆ ಪಿರಿಯರ ಮೊಗಂ ನೋಡಿ
ಬಂದ ಬಂದಗ್ರಹಾರದ ವಿಪ್ರರಂ ನೋಡಿ
ನಿಮ್ಮೂರ್ಗಳೊಳ್ ಬುದ್ಧಿವಂತರಪ್ಪವರೊಳರೆ
ಸುಮ್ಮಾನಿಗಳ್ ಕೋವಿದರ್ ನೀತಿವಿದರೊಳರೆ ?
ಎನೆ ಕೊಂಡಗೂಳಿಯ ಮಹಾಜನಂಗಳು ಕೇಳ್ದು
ಮನವೊಸೆದು ನುಡಿದರತ್ಯುತ್ಸಾಹಮಂದಾಳ್ದು
ದೇವ ಎಮ್ಮಯ ಪುರದೊಳೊರ್ವ ಸಜ್ಜನರುಂಟು
ಭಾವಜ್ಞರತಿನಿಯತರನುಪಮಾಸ್ಪದರುಂಟು
ಅವರನಾಮಂ ಕೇಶಿರಾಜಮೆಂಬುದು ಧರೆಗೆ
ಅವರ ಶೀಲಂ ವಿಚಿತ್ರಂ ಸೊಗಯಿಪುದು ನಿಮಗೆ."[೩]

ಒಮ್ಮೆ ಪೆರ್ಮಾಡಿರಾಯ ತನ್ನ ಆಸ್ಥಾನ ಪಂಡಿತರನ್ನು ಕುರಿತು ನಿಮ್ಮೂರ್ರಲ್ಲಿ ಮಂತ್ರಿಯಾಗಬಲ್ಲ ಅರ್ಹತೆ ಪಡೆದಿರುವ

ವ್ಯಕ್ತಿಗಳನ್ನು ಹೆಸರಿಸಬೇಕೆಂದು ಕೇಳುತ್ತಾನೆ. ಆಗ ಕೊಂಡ ಗುಳಿಯ ಮಹಾಜನಗಳು ಕೇಶಿರಾಜನ ಅರ್ಹತೆಯ ಬಗ್ಗೆ ಹೇಳುತ್ತ ಆತನು ನೀತಿವಿದನೂ, ಕೋವಿದನೂ ಹಾಗೂ ಭಾವ ಜ್ಞನೂ ಆಗಿದ್ದಾನೆಂದು ಹೇಳಿ ಅವನ ಶೀಲಗಳ ಹಿರಿಮೆಯನ್ನು ಸಾರಿದಾಗ ಅರಸನು ಮೆಚ್ಚಿ ಕೇಶಿರಾಜನಿಗೆ ಮಂತ್ರಿಪದವಿ ಯನ್ನು ನೀಡುತ್ತಾನೆ. ಇದು ಹರಿಹರ ಕವಿಯ ಕಲ್ಪಿತ ಮಾರ್ಪಾಡಾಗಿದ್ದರೂ ಸಹ ಸ್ವತಃ ತಂದೆಯಾದ ನಿಂಬಣಯ್ಯನೇ ದಂಡನಾಯಕನಾಗಿದ್ದುದರಿಂದ ತಂದೆಯ ಸ್ಥಾನ ಮಗನಿಗೆ ದೊರೆತಿರುವ ಸಾಧ್ಯತೆಯೇ ಹೆಚ್ಚು.

ಹರಿಹರ ಕವಿಯು ಹೇಳುವ ಪೆರ್ಮಾಡಿರಾಯ ಕಲಿ ಯುಗವನ್ನು ಕೃತಿಯುಗವನ್ನಾಗಿಸಿದ ಚಾಲುಕ್ಯ ೬ನೇ ವಿಕ್ರಮಾ ದಿತ್ಯ (ಕ್ರಿ.ಶ. ೧೦೭೬–೧೧೨೬) ಎಂಬುದರಲ್ಲಿ ಯಾವ ಸಂದೇ ಹವೂ ಇಲ್ಲ. ಐವತ್ತು ವರ್ಷಗಳ ಸುದೀರ್ಘ ಆಳ್ವಿಕೆ ಮಾಡಿದ ಈ ಅರಸು ತನ್ನ ಹೆಸರಿನಿಂದ 'ವಿಕ್ರಮ ಶಕೆ'ಯನ್ನೇ ಪ್ರಾರಂಭಿ ಸಿದ ಧೀರೋದಾತ್ತ. ಈ ಅರಸನ ಆಸ್ಥಾನಪಂಡಿತರಾದ ಬಿಲ್ಹಣ ಹಾಗೂ ವಿಜ್ಞಾನೇಶ್ವರರ ಪ್ರಕಾರ ಈತನದು ರಾಮರಾಜ್ಯ ವಾಗಿದ್ದಿತಲ್ಲದೆ ವಿಕ್ರಮಾದಿತ್ಯನಂಥ ದೊರೆ, ರಾಜಧಾನಿ ಕಲ್ಯಾಣ ದಂಥ ಪಟ್ಟಣ ಹಿಂದೆಯೂ ಇರಲಿಲ್ಲ ಮುಂದೆಯೂ ಇರ ಲಾರದು. ಇಂಥ ಉಜ್ವಲ ಪರಾಕ್ರಮವುಳ್ಳ ಅರಸನಲ್ಲಿ ಕೇಶಿರಾಜ 'ದಂಡಾಧೀಶ'ನಾಗಿದ್ದನು.

ಇದುವರೆಗೆ ಒಟ್ಟು ಒಂಭತ್ತು ಶಾಸನಗಳು ಕೊಂಡಗುಳಿ ಯಲ್ಲಿ ದೊರಕಿವೆ. ಅವುಗಳಲ್ಲಿ ಐದು ಶಾಸನಗಳು ಆರನೇ ವಿಕ್ರಮಾದಿತ್ಯನ ಕಾಲದಲ್ಲಿಯೇ ಹುಟ್ಟಿರುವುದರಿಂದ ಅಲ್ಲಿ ದಂಡಾ

ಧೀಶರಾಗಿದ್ದ ನಿಂಬಣಯ್ಯ ಹಾಗೂ ಕೇಶಿರಾಜರ ಊರು ಕೊಂಡಗುಳಿ ಎಂಬುದು ಸ್ಪಷ್ಟ. ಮಹಾಜನಗಳಿಂದ ಕೂಡಿದ ಕೊಂಡಗುಳಿ ಅಗ್ರಹಾರವು ವಿದ್ಯಾಪ್ರಸಾರದ ಕೇಂದ್ರವಾಗಿತ್ತೆಂಬುದನ್ನು ಹಾಗೂ ಅಂದಿನ ಅಭ್ಯಾಸದ ವೈವಿಧ್ಯವನ್ನು ಸಾರುವ ೧೧೩೨ರ ಶಾಸನ ಹೀಗಿದೆ.

"ವಿದ್ಯಾದಾನ ನಿಮಿತ್ತವಾಗಿ ಸೂತ್ರಸಂಹಿತೆ ಪಿರಿಯಗ್ರಂಥಗಳಂ ಪೇಳ್ವವುಪಾಧ್ಯಾಯರ್ಗೆ ಪೊಂನ್ನವೃದ್ಧಿಯಲೆ ಗ್ರಾಸ ನಡವಂತಾಗಿ ಪೊಂಗೆ ತಿಂಗಳಿಂಗೆ ವೀಸಂ ನಾಲ್ಕಱ ವಡ್ಡಿಯಲು ಕೊಟ್ಟ ವರ್ತಕ ಲೊಕ್ಕಿಗದ್ಯಾಣ.[೨೦]

ಮತ್ತಂ ಸಂಹಿತೆಯುಂ ಕಿಱಿಯ ಗ್ರಂಥಂಗಳುಂ ಯಾಜ್ಞ-ವಲ್ಕ ಸಹಿತ ಪೇಳ್ವ ಉಪಾಧ್ಯಾಯರ್ಗೆ ಪೊಂನವೃದ್ಧಿಯಲೆ ಗ್ರಾಸ ನಡವಂತಾಗಿ ಪೊಂಗೆ ತಿಂಗಳಿಂಗೆ ವೀಸಂ ನಾಲ್ಕರ ವೃದ್ಧಿಯಂ ಕೊಟ್ಟ ವರ್ತಕ ಲೊಕ್ಕಿಗದ್ಯಾಣ.[೨೧]

ಮತ್ತಂ (ಅ)ಕ್ಷರ ವ್ಯಾಕರಣ 'ರೂಪಾವತಾರ' ಮಿಂತಿನಿತುಂ ಪೇಳ್ದು ಬಾಲ ಶಿಕ್ಷೆಯಂ ಮಾಳ್ಪ ಉಪಾಧ್ಯಾಯರ್ಗೆ ಪೊಂನ ವೃದ್ಧಿಯಲೆ ಗ್ರಾಸ ನಡವಂತಾಗಿ ಪೊಂಗೆ ತಿಂಗಳಿಂಗೆ ವೀಸಂ ನಾಲ್ಕಱ ವೃದ್ಧಿಯಂ ಕೊಟ್ಟ ವರ್ತಕ ಲೊಕ್ಕಿಗದ್ಯಾಣ[೨೨]

ಸ್ವತಃ ಕವಿಯಾದ ಕೇಶಿರಾಜನು ದತ್ತಿ ನೀಡುವದರ ಮೂಲಕ ತಮ್ಮ ಊರಿನಲ್ಲಿ ವಿದ್ಯಾದಾನ ವ್ಯವಸ್ಥೆ ಮಾಡಿದ್ದನೆಂಬುದು ಗಮನಾರ್ಹ. ಡೋಣಿ ಕೊಂಡಗುಳಿಯೇ ಕೇಶಿರಾಜನ ಊರು ಎಂಬುದಕ್ಕೆ ಖಚಿತತೆಯನ್ನು ಈ ಮಾತುಗಳು ಒದಗಿಸುತ್ತವೆ. ಇದಕ್ಕೆ ಇನ್ನೊಂದು ನಿದರ್ಶನ ನೋಡ

ಬಹುದು. ೧೧೦೭ರ ಶಾಸನದಲ್ಲಿ ದೇವಾಲಯದ ವ್ಯವಸ್ಥೆಗೆ ದಾನ ಬಿಟ್ಟಿರುವ ವಿವರವಿದೆ. ಈ ವ್ಯವಸ್ಥೆ ಅಗ್ರಹಾರದ ಇನ್ನೊಂದು ಉಪಕ್ರಮ. ಸ್ವತಃ ಕೇಶಿರಾಜ ದಂಡನಾಯಕರು "ತಾವು ಮಾಡಿಸಿದ ಶಿವಾಲಯದ ಮೂಲಸ್ಥಾನದ ಶ್ರೀ ಸೋಮೇಶ್ವರ ದೇವರ್ಗೆ ತಮ್ಮ ಪ್ರಭುತ್ವದ ಡೋಣಿಯಿಂ ತೆಂಕ ಒಡ್ಡವಾಡಿಗೆಯ ಬಟ್ಟೆಯಿಂ ಪಡುವ ಬನ್ದ ಚಿಂನ್ತಾಮಣಿಯ ಈರ್ಪತ್ತೆಂಟು ಗೇಣ ಕೋಲಲು ತಮ್ಮಂ(ಶ)ಕ್ಕೆ ಬಂದ ಮತ್ತ ರಯ್ವತ್ತೇಳಱಿೊಳಗೆ" ಒಂದಿಪ್ಪು ಭಾಗ ಭೂಮಿಯನ್ನು ನೀಡಿದ ಈ ಕ್ಷೇತ್ರ ಡೋಣಿ ನದಿಯ ದಕ್ಷಿಣದಲ್ಲಿ ಒಡ್ಡವಾಡಗಿಗೆ ಹೋಗುವ ದಾರಿಯ ಪಶ್ಚಿಮಕ್ಕೆ ಇವರ ಮನೆತನಕ್ಕೆ ಸಂಬಂಧಿಸಿದ ಐವತ್ತೇಳು ಮತ್ತರ ವಿಸ್ತಾರದ ಹೊಲವಿದ್ದಿತೆಂದು ತಿಳಿದು ಬರುತ್ತದೆ. ಈ ಶಾಸನದಲ್ಲಿ ಹೇಳಿದ ಸೋಮೇಶ್ವರ ದೇವರು ಕೇಶಿರಾಜನ ಇಷ್ಟ ದೈವ.

ಕೊಂಡಗುಳಿಯಲ್ಲಿ ಕೇಶವೇಶ್ವರ ದೇವಾಲಯವಿದ್ದುದನ್ನು ೧೧೩೭ ರ ಶಾಸನ ಹೀಗೆ ಹೇಳುತ್ತದೆ.

"ಶ್ರೀಮತ್ಸರ್ವನಮಸ್ಯದಗ್ರಹಾರ ಕೊಂಡಂಗುಲಿ(ಳಿ)ಯ ಶೇಷ ಮಹಾಜನಂಗಲು(ಳು) ಶ್ರೀ ಕೇಶವದೇವರ್ಗೆ ದೀಪದಾನವಾಗಿ ಗಾಣವಾಯಿಲೆಯಲ್ಲಿ ದೇವಸ(ದ)ಲು ಸೊಲ್ಲಗೆಯೆಣ್ಣೆಯಂ ಕೊಟ್ಟರು ಮತ್ತಂ ಪುಷ್ಪದಾನವಾಗಿ ಯೆರೆವತ್ತರು ತೋಂಟ-ಮಂ ಕೊಟ್ಟರು."

'ಪ್ರಾಚೀನಕಾಲದಿಂದಲೂ ಆ ಊರಿನಲ್ಲಿದ್ದ ಈ ದೇವರ ಹೆಸರನ್ನು ಕೇಶಿರಾಜನಿಗೆ ಇಟ್ಟಿರಬೇಕು. ಅಥವಾ ಕೇಶಿರಾಜನೇ

ಈ ದೇವಾಲಯ ಕಟ್ಟಿಸಿ ದೇವರಿಗೆ ತನ್ನ ಹೆಸರು ಇಟ್ಟಿರಬೇಕೆಂಬ' ಅಭಿಪ್ರಾಯ ವಿದ್ವಾಂಸರದಾಗಿದೆ. ಕೇಶಿರಾಜನ ಗುರು ಶ್ರೀವಿರುಪಾಕ್ಷದೇವರೆಂದೂ ಹೆಂಡತಿ ಗಂಗಾದೇವಿ ಎಂದೂ ಹರಿಹರನ 'ಕೇಶಿರಾಜ ದಣ್ಣಾಯಕರ ರಗಳೆ'ಯಿಂದ ತಿಳಿದುಬರುತ್ತದೆ. ಈ ಊರಿನಲ್ಲಿ ಜ್ಯೋತೀಶ್ವರ, ಮಲ್ಲಿ–ಕಾರ್ಜುನ, ಭಳಾರಿದೇವಾಲಯಗಳೂ ಕಲ್ಲುಮಠ ಹೆಸರಿನ ಒಂದು ಮಠವೂ, ಸೋಮಬೀದಿ, ಸೂರ್ಯಬೀದಿ ಹೆಸರಿನ ರಸ್ತೆಗಳೂ ಇದ್ದವೆಂದು ಶಾಸನಗಳು ತಿಳಿಸುತ್ತವೆ. (ಸದ್ಯ ಈ ಊರಿನಲ್ಲಿ 'ಕಲ್ಲು' ಮಠ ಹೆಸರಿನ ಮಠವಿರದೆ 'ಗದ್ದಗಿ' ಮಠ ಎಂಬ ಹೆಸರಿನ ಮಠವಿದೆ. ಈ ಮಠದ ಮೇಲ್ವಿಚಾರಕ ಯಜಮಾನನ ಹೆಸರು ಕಲ್ಲಯ್ಯನೆಂದಿರುವದು ಗಮನಾರ್ಹ. ಒಂದು ಕಾಲಕ್ಕೆ ಅಗ್ರಹಾರವಾಗಿದ್ದ ಈ ಊರಿನಲ್ಲಿ ಇಂದು ಒಂದೂ ಬ್ರಾಹ್ಮಣ ಮನೆತನ ಇಲ್ಲದಿರುವುದು ಆಶ್ಚರ್ಯಕರ.)

ಇಷ್ಟು ಕೇಶಿರಾಜನ ಚರಿತ್ರೆ ಎನಿಸಿದರೂ ಆತನ ವಿವಿಧ ಮುಖಗಳನ್ನು ಅರಿತುಕೊಳ್ಳಬೇಕಾದರೆ ಅವನ ಕೃತಿಗಳನ್ನೇ ನೋಡಬೇಕು. ಹರಿಹರನ ಕೃತಿಗಳಂತೆ ಕೇಶಿರಾಜನ ಕೃತಿಗಳೂ ಸಹ ಆತ್ಮಚರಿತ್ರೆಯಿಂದ ಕೂಡಿವೆ. ಹರಿಹರನಿಗಾದ ಪ್ರೇರಣೆಗಳಲ್ಲಿ ಒಂದಿಷ್ಟು ಪಾಲು ಕೇಶಿರಾಜನಿಗೆ ಸಲ್ಲದೇ ಇರದು.

ಆನು ಕವಿಯಾನು ಸದುಗುಣಿ
ಯಾನು ಮಹಾದಾನಿ ಸಕಲವಿದ್ಯಾಜ್ಞಾಣಂ
ಆನೆಂಬುದಳಿದು ಪರಮ
ಜ್ಞಾನಾತ್ಮಕನೋಂ ನಮಃಶಿವಾಯೆಂಬ ಪದಂ
(ಮಂತ್ರಮಹತ್ವದ ಕಂದ, ಪದ್ಯ ೮೩)

ಒಂದೊಂದು ನಿಮಿಷ ಗಳಿಗೆಗೆ
ಳಂದಂದಿನ ಮಾಸವರ್ಷದಾಯುಷ್ಯಂಗಳ್
ಕುಂದದ ಮುನ್ನವೆ ನೆನೆನೆನೆ
ಸಂಧಿಸಿ ಬಿಡದೋಂ ನಮಃಶಿವಾಯೆಂಬ ಪದಂ.
(ಮಂತ್ರಮಹತ್ವದ ಕಂದ, ಪದ್ಯ ೭೦)

ಶಿವಯೆಂಬೆರಡಕ್ಕರಮವು
ಭವ ದುಃಖಿಯ ಬಾಯ್ಗೆ ಮಱೆದು ಬಂದೊಡೆ ಮತ್ತಾ
ಶಿವನಿಪ್ಪ ಸೆಜ್ಜೆಯೆಂದಾ
ಜವನೊಯ್ಯಂ ಶಿವನ ಮಹಿಮೆ ಸಾಧಾರಣಮೇ
(ಲಿಂಗಸ್ತೋತ್ರದ ಕಂದ, ಪದ್ಯ ೮೨)

ಆಸತ್ತೆ ಮಗನೆಯುಕ್ಕಟ
ಬೇಸತ್ತೈ ಶಿಶುವೆಯೆಂದು ಕೃಪೆಯಿಂದೆನ್ನಂ
ಈಸಾ ನೀನಾರಯ್ಯದ
ಬೇಸಱು ಘನವೆಂತು ಬರ್ದುಕುವೆಂ ಬೆಸಸಭವಾ
(ಲಿಂಗಸ್ತೋತ್ರದ ಕಂದ, ಪದ್ಯ ೮೫)

ಮುಂತಾದ ಪದ್ಯಗಳನ್ನು ನೋಡಿದಾಗ ಹರಿಹರ ಕವಿಯ 'ರಕ್ಷಾ ಶತಕ' ಹಾಗೂ 'ಪಂಪಾಶತಕ' ಸ್ಮರಣೆಗೆ ಬರುತ್ತವೆ. ಅಲ್ಲಿ ಅವು ಹರಿಹರನ ಆತ್ಮಕಥನಗಳಾಗಿರುವಂತೆ ಇಲ್ಲಿಯ ಕಂದಪದ್ಯಗಳು ಕೇಶಿರಾಜನ ಆತ್ಮಚರಿತ್ರೆಯನ್ನು ಸಾರುತ್ತವೆ.

# ಸಾಧನೆ

ಬಸವಯುಗದಲ್ಲಿ ನಡೆವ ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ಕ್ರಾಂತಿಗಳ ಮೂಲವು ಬಸವಪೂರ್ವಯುಗದಲ್ಲಿಯೇ ಸ್ಪಷ್ಟವಾಗಿ ಕಾಣಬರುತ್ತದೆ. ಐತಿಹಾಸಿಕ ಸತ್ಯವಾದ ಶರಣರು ಕೈಕೊಂಡ ಸಮಗ್ರ ಕ್ರಾಂತಿಯ ಹೊಳಹು ಕೇಶಿರಾಜ ಹಾಗೂ ಇನ್ನುಳಿದ ಆದ್ಯರ ಜೀವನ ಚರಿತ್ರೆಯಲ್ಲಿ ಕಂಡುಬರುತ್ತದೆ. ಪ್ರಫುಲ್ಲಿತವಾಗಿ ಅರಳಿನಿಂತ ಬಸವಧರ್ಮದ ಹುಟ್ಟಿಗೆ ಬೀಜೋಪಾದಿಯಾಗಿವೆ ಇವರ ಚರಿತ್ರೆ. "ಪ್ರಥಮಯುಗ"ದ ಜಾತಿ ನಿರ್ಮೂಲನ, ಸ್ತ್ರೀಪುರುಷ ಸಮಾನತೆ, ಕಾಯಕ ಮೊದಲಾದ ಸಾಮಾಜಿಕ ಸುಧಾರಣೆಯ ತೊರೆಗಳಿಗೆ ಹಿನ್ನೆಲೆಯಾದ ಸೆಲೆಗಳ ಚಲನವಲನಗಳು 'ಆದ್ಯಯುಗ'ದಲ್ಲಿಯೇ ಇವೆ."[೪] ಎಂಬ ಮಾತನ್ನು ಯಾರು ಬೇಕಾದರೂ ಆದ್ಯರ ಚರಿತ್ರೆಯಿಂದ ತಿಳಿದುಕೊಳ್ಳಬಹುದು. ಬಸವಯುಗದ ರಾಜಪ್ರತಿಭಟನೆ, ತೀರ ಜನಸಾಮಾನ್ಯರೊಂದಿಗೆ ಬೆರೆತುದು, ಅನುಭಾವ ಗೋಷ್ಠಿ, ವೀರಶೈವ ಪದಪ್ರಯೋಗ ಮುಂತಾದ ಅಂಶಗಳನ್ನು ಬಸವಪೂರ್ವದ ಹಾಗೂ ಹಿರಿಯ ಸಮಕಾಲೀನರಲ್ಲಿ ಕಾಣುತ್ತೇವೆ.

ಕೇಶಿರಾಜನ ಜೀವನದಲ್ಲಿ ನಡೆದಿರಬಹುದಾದ ಕೆಲವು ಘಟನೆಗಳನ್ನು ಹರಿಹರ ಕವಿ ತನ್ನ ರಗಳೆಯಲ್ಲಿ ಹೇಳಿದ್ದಾನೆ. ಹರಿಹರ ಕವಿಸಹಜವಾದ ಕಲ್ಪನೆಯಿಂದ ಕತೆಯನ್ನು ಹೆಣೆದಿರುವನೆಂದಾದರೂ ಸಾಂಕೇತಿಕವಾಗಿ ಬರುವ ಇಲ್ಲಿನ ಘಟನೆಗಳನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಕೇಶಿರಾಜ ದೊರೆಯಲ್ಲಿ ದಂಡಾಧೀಶನಾಗಿದ್ದರೂ ಆತ್ಮೋ ನ್ನತಿಗಾಗಿ ಶಿವಭಕ್ತರ ಸೇವೆಯನ್ನು ನಿಷ್ಠೆಯಿಂದ—

"ನೆನಹು ಶರಣರ ಮೇಲೆ ನಿಟ್ಟೆ ಶರಣರ ಮೇಲೆ
ಮುನಿಸು ಶರಣರ ಮೇಲೆ ನೇಹ ಶರಣರ ಮೇಲೆ
ಶರಣರೊಡತನ ಸುಖಂ ಶರಣರೊಡತನ ಲೀಲೆ
ಗುರುತರ ಸ್ನೇಹದಾತುರತೆ ಶರಣರ ಮೇಲೆ."

ಹೀಗೆ ಶರಣರ ಸಮೂಹದಲ್ಲಿರುವ ಕೇಶಿರಾಜ,

"ಹಸಿವು ತೃಷೆ ನಿದ್ರೆ ನುಡಿ ನೋಟಂಗಳಂ ಮರೆದು
ದೆಸೆವಾಯುವಾಗಸಂ ಧರೆಯೆಂಬುದಂ ಮರೆದಂ
ಅರಸನೋಲಗ ರಾಜ ಕಾರ್ಯಂಗಳಂ ಮರೆದು"

ಶರಣರ ಸಂಗೀತಗೋಷ್ಠಿಯೊಳಗೆ ಎಲ್ಲವನ್ನೂ ಮರೆಯುತ್ತಾನೆ. ಒಂದು ದಿನ ಅರಸು ಓಲಗಂಗೊಟ್ಟು ಅವಶ್ಯಕವಾದ ವಿಷಯ ಚರ್ಚಿಸುವದಕ್ಕೋಸ್ಕರ ಕೇಶಿರಾಜನನ್ನು ಕರೆಕಳುಹುತ್ತಾನೆ. ಈ ರಾಜಾಜ್ಞೆ ಕೇಶಿರಾಜನ 'ಶರಣರೊಡತನ ಗೋಷ್ಠಿ'ಗೆ ಭಂಗ ವುಂಟು ಮಾಡಿದಾಗ ಇದರಿಂದ ಸಿಡಿಮಿಡಿಗೊಂಡ ಕೇಶಿರಾಜ—

ಸಿರಿಯಸಂಗಂ ಶರಣಸಂಗಕ್ಕೆ ಪಗೆಯಾಯ್ತು
ನರನೋಲಗದಪರಾಧವು ಮರುಳು ಮಾಡಿತ್ತು
ಅಯ್ಯಯ್ಯ ಸೋಮನಾಥಯ್ಯ ನೀ ಕರುಣಿಪುದು
ಅಯ್ಯಲಾ ಶರಣಸದ್ಗೋಷ್ಠಿಯಂ ಕರುಣಿಪುದು

ದೇವಾ ಕಲ್ಯಾಣಧಿದೈವ ತ್ರಿಪುರಾಂತಕ
ದೇವಾ ಮನ್ಮಥ ದರ್ಪಮಥನದುರಿತಾಂತ

ಸಿರಿಹಾರಿಹೋಗೆ ನಿಮಗರ್ಚನೆಯ ಮಾಡುವೆಂ
ಶರಣತತಿ ಪುರಜನಂ ಮೆಚ್ಚಿಕೊಂಡಾಡುವೆಂ

ಹೀಗೆ ನಿರ್ಧರಿಸಿ ಅರಸನಲ್ಲಿಗೆ ಆಗಮಿಸುತ್ತಾನೆ. ಕೇಶಿರಾಜನ ಕೆಲವು ಜನ ವಿರೋಧಿಗಳು ಇದೇ ಸಮಯವೆಂದು ಅವನ ವಿರುದ್ಧ ರಾಜನ ಕಿವಿ ತುಂಬುತ್ತಾರೆ.

ದೇವಾ ಗುರುಪಾದ ಮುದ್ರಿಕೆಯುಂಟು ಕರದೊಳಗೆ
ದೇವಾ ನಿಮಗೆಂದುವುಂ ಪೊಡಮಡಂ ಮನದೊಳಗೆ
ಆವುಂಗುರಕ್ಕೆ ಪೊಡಮಡುತಿರ್ಪನರಿಯರೆ

ಎಂಬ ಮಾತನ್ನು ಹೇಳಿದ ಪರಸಮಯಿಗಳಿಗೆ ದೊರೆ ಕಿವಿ ಮಾರಿಕೊಳ್ಳುತ್ತಾನೆ. ಇದನ್ನು ಪರೀಕ್ಷಿಸಬೇಕೆಂದು ನಿರ್ಧಾರಕ್ಕೆ ಬರುತ್ತಾನೆ. ಅದೇ ವೇಳೆಗೆ ಆಗಮಿಸಿದ ಕೇಶಿರಾಜನ ಮೇಲೆ ಮುನಿಸನ್ನು ತೋರದೆ ಸಖ್ಯದಿಂದ ಸ್ವಾಗತಿಸಿ ಸಮಗದ್ದುಗೆ ಕೊಡುತ್ತಾನೆ. ಸಲ್ಲಾಪದ ಮಾತಿನ ಮಧ್ಯೆ ದೊರೆ ಉಂಗುರ ಕುರಿತಾದ ಮಾತು ತೆಗೆದು ನೂತನವಿದು ನೋಡೋಣವೆಂದು ಅದನ್ನು ಪಡೆದು ತನ್ನ ಬೆರಳಲ್ಲಿ ಧರಿಸುತ್ತಾನೆ. ಕೊನೆಗೆ ಮನೆಗೆ ನಡೆ ಎಂದು ಅಪ್ಪಣೆಕೊಡಿಸಿದಾಗ ಕೇಶಿರಾಜ ದೊರೆಗೆ ನಮಸ್ಕರಿಸದೇ ಹೊರಡಲಣಿಯಾಗುತ್ತಾನೆ. ಕೇಶಿರಾಜನ ಈ ನಡತೆಯಿಂದಾಗಿ ದೊರೆಗೆ ಎಲ್ಲಿಲ್ಲದ ಕೋಪ.

"ಕಂಡಿರೇ ಎನ್ನಿಂದಮೇ ಸಂಪದಂ ಒಡೆದು
ಅಂಡಲೆದ ದಾರಿದ್ರ್ಯವೆಲ್ಲವಂ ನೆರೆತೊಡೆದು
ಎನಗೆಪೊಡಮಡದುದಾಸೀನಮಂ ಮಾಳ್ಪರೇ
ಮನವಾರೆ ಎಮ್ಮಮಂ ಲಘುಮಾಡಿನೊಳ್ಪರೇ"

ಹೀಗೆ ಹರಿಹಾಯ್ದ ದೊರೆಗೆ ಕೇಶಿರಾಜನ ಉತ್ತರವಿಷ್ಟೇ,

ಕೇಶರಸ ನಿನ್ನ ಸಿರಿ ನಿನಗಿಕ್ಕೆ ನಿನಗಿಕ್ಕೆ
ಶೂಲಿಯುಣುಗರ ಸಂಗ ಸಂಪದವದೆ ಎನಗಿಕ್ಕೆ

ಎಂದು ಹೇಳಿ ಅರಸನ ಆಭರಣಗಳೆಲ್ಲವನ್ನೂ ಕಳಚಿಟ್ಟು ಕೇಶಾಂಬರವನುಟ್ಟು, 'ಸೇವಕನ ವೃತ್ತಿಯಂ ಮನದಕಾಲಿಂದೊದೆದು' ಹೊರಮಡುತ್ತಾನೆ. ಜೊತೆಗೆ ಪರಮ ಶಿವಭಕ್ತೆಯಾದ ಈತನ ಹೆಂಡತಿಯೂ 'ವೇತ್ರಮನುಟ್ಟು ಭಸಿತಮನಿಟ್ಟು, ಕರಕಮಲಸ್ಥಿತ ಶಿವಲಿಂಗ ಸಂಪನ್ನೆಯಾಗಿ' ಕೇಶಿರಾಜನನ್ನೇ ಅನುಸರಿಸುತ್ತಾಳೆ.

ಈ ಕತೆಯಿಂದ ತಿಳಿದು ಬರುವದಿಷ್ಟು–ಶಿವಭಕ್ತಿಗೆ ರಾಜಭಕ್ತಿ ಅಡ್ಡಿಯಾದಾಗ ಅಂಥ ರಾಜತ್ವವನ್ನು ಸ್ಪಷ್ಟವಾಗಿ ಪ್ರತಿಭಟಿಸಿದ್ದುದು. ಕೇಶಿರಾಜನ ಸಮಕಾಲೀನರಾದ ತೆಲುಗು ಜೊಮ್ಮಯ್ಯ, ಕೆಂಭಾವಿ ಭೋಗಣ್ಣನವರ ಕತೆಯಲ್ಲಿಯೂ ಇಂಥ ಘಟನೆಗಳು ನಡೆದಿದ್ದನ್ನು ಗಮನಿಸಿದಾಗ ಬಸವಣ್ಣನವರ ಅಧಿಕಾರದ ಬಗೆಗಿರುವ ಸೇವಕವೃತ್ತಿಯ ಕುರಿತಾದ ನಿರ್ಲಕ್ಷತನಕ್ಕೆ ಪ್ರೇರಣೆಯಾಗಿ ಈ ಕತೆಗಳು ನಿಲ್ಲುತ್ತವೆ.

ಕಲ್ಯಾಣದಿಂದ ಹೊರಮಟ್ಟ ಈ ದಂಪತಿಗಳು ಶಿವಪುರವೆಂಬ ಊರನ್ನು ತಲುಪುತ್ತಾರೆ. ಅಲ್ಲಿ 'ಬಿದಿರ'ಕಾಯಕದ 'ವಂಶವರ್ಧನ' ನೆಂಬ ಮಹಾಮಾಹೇಶ್ವರನು ಇವರನ್ನು ಸ್ವಾಗತಿಸಿ ಸತ್ಕರಿಸುತ್ತಾನೆ. ಕೆಲವುದಿನ ಅವನ 'ಗುಡಿಸಿಲ' ಸ್ವರೂಪದ ಮನೆಯಲ್ಲಿಯೇ ಉಳಿದು ಶಿವಗೋಷ್ಠಿ ನಡೆಸುತ್ತಾರೆ. ಒಂದು ದಿನ ಗೋಷ್ಠಿಗೆ ಕಾವೇರುತ್ತದೆ "ಜೇನಸೊನೆಯಾಳ್ದಂತೆ ಇರುಳ್ ಪಗಲುಂ ಅರಿಯದೆ ನಿದ್ರೆ ಪಸಿವಂ ಮರೆದು ತಮ್ಮ

ಷ್ಟಲಿಂಗಕ್ಕಾನಂದರಸದ ಮಜ್ಜನಂ. ಪುಳುಕದ ಪೂಜೆ ನಿಜ ಶ್ವಾಸಮೇ ಪರಿಮಳಧೂಪಂ, ಗೀತದಾರತಿ, ಗೋಷ್ಠಿಯಾರೋಗಣೆಯಾಗಿ ಶಿವಭಕ್ತಿಸುಖ ಪ್ರಸಂಗಪ್ರಸಾದ ಸಂತುಷ್ಟರಾಗಿರ್ಪರ್." ಹೀಗೆ ಅವ್ಯಾಹತವಾಗಿ ಏಳುದಿನಗಳವರೆಗೂ ಶರಣ ಸಂಗಸುಖದಲ್ಲಿ ಕಳೆಯುತ್ತಾರೆ. ಕೊನೆಗೆ ಮಡದಿ ಗಂಗಾದೇವಿಯೂ ಬಂದೇ ಎಚ್ಚರಿಸಬೇಕಾಗುತ್ತದೆ. ಅಂದು ಶಿವಪುರದಿಂದ ತ್ರಿಪುರಾಂತಕದೇವರ ರಂಗಮಂಟಪದವರೆಗೆ ಶಿವತಿಂತಿಣಿ ಕೂಡುತ್ತದೆ. ಈ ಉತ್ಸವವನ್ನು ದೊರೆ ಪೆರ್ಮಾಡಿರಾಯನು ಕಂಡು ಬೆರಗಾಗಿ, ಪಶ್ಚಾತ್ತಾಪಪಟ್ಟು 'ಪಿರಿಯರನರಿಯದ ನರಕ ಜೀವಿಗೆ, ಪೂಜ್ಯರನರಿಯದ ಪುಣ್ಯಹೀನಂಗೆ ಕರುಣಿಸಿ ನಿಮ್ಮಡಿಗಳ ಅರಮನೆಯೆ ಮಹಾಮನೆಯಾಗಿ ಎನ್ನ ಭಂಡಾರವೇ ನಿಮ್ಮದಾಗಿ ಭಕ್ತರ್ಗಾರಾಧಿಸಿ ನಿಶ್ಚಿಂತನಾಗಿ ನಿರುಪಮ ಶಿವಗೋಷ್ಠಿಯಿಂ ಬಿಜಯಂಗೈದೆನ್ನ ಕೃತಾರ್ಥನಂ ಮಾಡಿರಿ' ಎಂದು ಹೇಳಿದ ದೊರೆ ಮತ್ತೆ ಕೇಶಿರಾಜನಿಗೆ ಮಂತ್ರಿಪದವಿಯನ್ನೀಯುತ್ತಾನೆ.

ಅಪ್ಪಟ ಶಿವಭಕ್ತನಾದ ಬೇಟೆಗಾರ ತೆಲುಗು ಜೊಮ್ಮಯ್ಯನ ವಿಚಿತ್ರಭಕ್ತಿಯ ರೀತಿಯನ್ನು ಕೇಳಿ, ಅವನನ್ನು ಕಾಣಲು ಶರಣ ಸಮೂಹದೊಡನೆ ಕೇಶಿರಾಜನು ಅವನ ಮನೆಗೆ ನಡೆತರುತ್ತಾನೆ. ಆದರೆ ಮನೆಯಲ್ಲಿ 'ಒಳಗೆ ಪುಗಲ್ತೆ ಪಿಶಿತಾವಳಿಗಳಿರೆ ಕಂಡು ಮನದೊಳಗೆ ಕೊಕ್ಕರಿಸಿ ಹೇಸಿಕೆಯ ಕೈಕೊಂಡು ತಿರುಗಿ ಬಂದ' ಕೇಶಿರಾಜ ಆ ಊರ ದೇವಾಲಯದಲ್ಲಿ ತಂಗುತ್ತಾನೆ. ಸಸ್ಯಾಹಾರಿಯಾದ ಕೇಶಿರಾಜನಿಗೆ ಮಾಂಸಾಹಾರಿಯಾದ ತೆಲುಗುಜೊಮ್ಮಯ್ಯ ಕರೆಯಲಟ್ಟಿದು 'ಕೈ ಮುಗಿದು ಬಪ್ಪುದೇ

ಎನ್ನಯ ಮಹಾಮನೆಗೆ ನೀವೆಂದು ಎನ್ನ ಪುಣ್ಯದ ಫಲಂ ಲೇಸಾದುದು' ಎಂಬುದಾಗಿ ಬೇಡಿ ಕೊಳ್ಳುತ್ತಾನೆ. ತೆಲುಗು ಜೊಮ್ಮಯ್ಯನ ಮನೆಯಲ್ಲಿ

'ಶಿವಗೋಷ್ಠಿಯೊಳಗಿರ್ದು ಪರಮಸುಖಮಂದಾಳ್ದು
ಶಿವಧಿಡುವ ಮೃಗಸಂಕುಳದ ಹುಯ್ಯಲಂ ಕೇಳ್ದು'

ಜೊಮ್ಮಣ್ಣನ ಈ ಭಕ್ತಿಗೆ ಮೆಚ್ಚಿ ಬೆರಗಾಗಿ ಮರಳಿ ಕಲ್ಯಾಣ ಪುರದತ್ತ ಬರುತ್ತಾನೆ.

ಹೀಗೆ ಬರುವಾಗ ನಿಸರ್ಗರಮಣೀಯತೆಯ ಸೊಬಗನ್ನು ಸವಿಯುತ್ತ ಒಂದು ನದಿಯದಡವನ್ನು ತಲುಪುತ್ತಾರೆ. 'ಮೆರೆವ ಶೋಕೆಯ ಮಾಮರದ ತಳದ ನೆಳಲೊಳಗೆ' ವಿವಿಧ ಹೂಗಳನ್ನು ಹಾಸಿ ತಳಿರ ಸಿಂಹಾಸನದ ಮೇಲೆ ಲಿಂಗವನ್ನು ಸ್ಥಾಪಿಸಿ ಗಂಧಾಕ್ಷತೆಗಳಿಂದ ಅಲಂಕರಿಸಿ ಪಂಚಾಕ್ಷರಿಯ ಮಂತ್ರದಿಂದ ಪಂಚಮುಖನನ್ನು ಜಪಿಸುತ್ತಿರಲು ಗಗನದಲ್ಲಿ ವಿಹರಿಸುತ್ತಿರುವ ಒಂದು ಗರುಡ ಹಕ್ಕಿಯು ಕೆಂಪು ದಾಸಾಳದ ಹೂವನ್ನು ಮಾಂಸವೆಂದು ಭ್ರಮಿಸಿ, ಎರಗಿ ಲಿಂಗಸಮೇತ ಆ ಹೂವನ್ನು ಭರದಿಂದ ಎತ್ತಿಕೊಂಡು ಹೋಗುವಾಗ ಲಿಂಗ ಕಳಚಿ ನೀರ ಮಧ್ಯದಲ್ಲಿ ಬೀಳುತ್ತದೆ. ಬಿದ್ದಲಿಂಗವನ್ನು ಪಡೆಯಲು ಆತ್ಮಾಹುತಿ ಮಾಡಿಕೊಳ್ಳಲು ಅಣಿಯಾಗಿ ಲಿಂಗನಿಷ್ಠೆಯನ್ನು ಮರೆಯಲನುವಾಗುತ್ತಾನೆ. ಇದನ್ನು—

'ನೋಡಿ ಶರಣರ್ಪರಿದು ಬಂದು ಕೆಯ್ಯಂ ಹಿಡಿದು
ಬೇಡ ಬೇಡೆಲೆಲೆ ಹಿರಿಯಾಣೆಯೆನುತುಂ ಜಡಿದು'

ಸಮಾಧಾನ ಹೇಳಿ ಅವರೆಲ್ಲರೂ ಸಹಾಯಮಾಡಲು ಮುಂದಾಗುತ್ತಾರೆ. ಆಗ ಕೇಶಿರಾಜನು ಸ್ವತಃ ಹುಡುಕಲು ಹರಿಗೋಲು

ಹತ್ತಿ ನೀರಿಗಿಳಿದು ಹೀಗೆ ನುಡಿಯುತ್ತಾನೆ. ಲಿಂಗವಲ್ಲದೆ

'ಮತ್ತೊಂದು ದೈವಮುಂಟೆಂಬುದಂ ಬಗೆದೊಡಂ
ಮತ್ತೊಂದು ಸಮಯಮುಂಟೆಂದಂ ನಾಂ ನುಡಿದೊಡಂ
ಎನ್ನ ಸತಿಯಲ್ಲದನ್ಯಕ್ಕೆಳಸಿ ನಿಂದೊಡಂ
ನಿನ್ನವರ್ಗಳಲ್ಲದನ್ಯರ್ಗಿನಿತನಿತ್ತೊಡಂ
ನುಡಿವಲ್ಲಿ ಸತ್ಯವಲ್ಲದೆ ಬೇರೆ ನುಡಿದೊಡಂ
ನಡೆವಲ್ಲಿ ನಾ ದುರಾಚಾರದಿಂ ನಡೆದೊಡಂ
ಮನಸಿನೊಳ್ನೀನಲ್ಲದನ್ಯನಂ ನೆನೆದೊಡಂ
ಕನಸಿನೊಳ್ ನೀನಲ್ಲದನ್ಯನಂ ಕಂಡೊಡಂ
ಇದು ದಿವ್ಯಮೆಂದೆನುತೆ ಹರಿಗೋಲನೇರಿದಂ'

ಶೀಲವಂತನಾದ ಶಿವವ್ರತಿಯ ಪರಿಪರಿಯ ಕರೆಗೆ ಶಿವನ ಹರಿಗೋಲ ಹುಟ್ಟಿನಲ್ಲಿ ಕಾಣಿಸುತ್ತಾನೆ. ಶರಣತತಿ ಜಯಘೋಷ ಮಾಡುತ್ತಾರೆ. ಮೆಚ್ಚಿದೇವಗಣ ಕೇಶಿರಾಜನನ್ನು ಕೈಲಾಸಕ್ಕೊಯ್ಯುತ್ತಾರೆ.

ಇದಿಷ್ಟು ಹರಿಹರ ಕವಿಯ ಕೇಶಿರಾಜ ದಣ್ಣಾಯಕ ರಗಳೆಯ ಕಥಾಸಾರ. ಈತನೇ ತೆಲುಗು ಜೊಮ್ಮಯ್ಯನ ರಗಳೆಯಲ್ಲಿಯೂ ಸಾಂದರ್ಭಿಕವಾಗಿ ಕೇಶಿರಾಜನನ್ನು, ಕುರಿತು ಬರೆದಿದ್ದಾನೆ. ಮುಂದಿನ ವೀರಶೈವ ಕವಿಗಳು ಪ್ರಾಸ್ತಾವಿಕವಾಗಿ ಈತನ ಕುರಿತು ಹೇಳುತ್ತ ಸ್ಮರಿಸುತ್ತ ಸಾಗಿದ್ದಾರೆ. ಮೇಲಿನ ರಗಳೆಯಿಂದ ಕೇಶಿರಾಜನ ಜೀವನದಲ್ಲಿ ಪ್ರಮುಖವಾಗಿ ನಾಲ್ಕು ಘಟನೆಗಳು ಎದ್ದು ಕಾಣುತ್ತವೆ.

೧) ರಾಜಪ್ರತಿಭಟನೆ ಹಾಗೂ ಸೇವಕವೃತ್ತಿಯ ತಾತ್ಸಾರ

೨) ಬಿದಿರು ಕಾಯಕದ ದಲಿತವರ್ಗದ ವಂಶವರ್ಧನ ನಲ್ಲಿ ಆಶ್ರಯಿಸಿ ಅವನೊಂದಿಗೆ ಬೆರೆತುದು

೩) ಮಾಂಸಾಹಾರಿಯಾದ ತೆಲುಗುಜೊಮ್ಮಯ್ಯ ನೊಂದಿಗೆ ಶರಣಗೋಷ್ಠಿ ನಡೆಸಿದುದು

೪) ಲಿಂಗನಿಷ್ಠೆ ಮೆರೆಯುವಲ್ಲಿ ಆತ್ಮಾರ್ಪಣೆ ಮಾಡಿ ಕೊಳ್ಳಲು ಸಿದ್ಧನಾದ ವೀರಭಕ್ತಿ

ಹೀಗೆ ಬಸವಪೂರ್ವದ ಶರಣಧರ್ಮದ ಸ್ವರೂಪ ಮೇಲಿನ ಇಂಥ ಅಂಶಗಳಿಂದ ಅರಿತುಕೊಳ್ಳಬಹುದಾಗಿದೆ. ಡಾ। ಎಂ. ಚಿದಾನಂದಮೂರ್ತಿಯವರು ಮತ್ತು ಡಾ। ಎಂ. ಎಂ. ಕಲಬುರ್ಗಿಯವರು ಬಸವಪೂರ್ವದ ಶರಣಧರ್ಮದ ಪಟ್ಟಿ ಯನ್ನು ಹೀಗೆ ಮಾಡುತ್ತಾರೆ[೫] —

೧) ಎಲ್ಲ ಜಾತಿಯವರಿಗೂ ಶರಣಸಮೂಹದಲ್ಲಿ ಮನ್ನ ಣೆಯಿದ್ದಿತು.

೨) ಶರಣರು ಬೇರೆ ಬೇರೆ ಕಾಯಕಗಳನ್ನು ಕೈಕೊಂಡಿ ದ್ದರು.

೩) ಶಿವಭಕ್ತರಲ್ಲಿ ಮಾಂಸಾಹಾರಿಗಳೂ ಇದ್ದರು, ಸಸ್ಯಾಹಾರಿಗಳೂ ಇದ್ದರು.

೪) ಅಧಿಕಾರದ ಬಗ್ಗೆ ಸಂಪೂರ್ಣನಿರ್ಲಕ್ಷವನ್ನು ತಾಳಿ ರಾಜತ್ವವನ್ನು ಧಿಕ್ಕರಿಸುತ್ತಿದ್ದರು.

೫) ಕರ್ಮಪ್ರಧಾನವಾದ ವೈದಿಕಧರ್ಮವನ್ನು ಮತ್ತು ಜೈನಧರ್ಮವನ್ನು ವಿರೋಧಿಸುತ್ತಿದ್ದರು.

೬) ಕೊರಳಲ್ಲಿ ಕಟ್ಟಿಕೊಳ್ಳುತ್ತಿದ್ದ ಲಿಂಗವನ್ನು ಅಂಗೈ ಯಲ್ಲಿಟ್ಟು ಇಲ್ಲವೇ ಸಿಂಹಾಸದಲ್ಲಿಟ್ಟು ಪೂಜಿಸುತ್ತಿದ್ದರು.

ಅಂದರೆ ಸ್ಥಾವರ ಹಾಗೂ ಇಷ್ಟಲಿಂಗಗಳನ್ನು ಪೂಜಿಸುತ್ತಿದ್ದರು.

೭) ಲಿಂಗಕಳೆದರೆ ಪ್ರಾಣದ ಹಂಗುದೊರೆಯಲು ಸಿದ್ಧರಾಗುತ್ತಿದ್ದರು.

೮) ಶಿವಗೋಷ್ಠಿಯೊಳಗೆ ಲಿಂಗಭೇದವಿದ್ದಿರಲಿಲ್ಲ.(ಲಕುಮಾದೇವಿ, ಸುಗ್ಗಲೆ, ಗಂಗಾದೇವಿ ಮೊದಲಾದವರೂ ಭಾಗಿಯಾಗಿದ್ದರು).

೯) ಬಸವಾದಿಪ್ರಮಥರು 'ಬಿಜ್ಜಳ' ಶಕ್ತಿಯೊಂದಿಗೆ ಸೆಣಸಿದರೆ ಕೇಶಿರಾಜಾದಿ ಆದ್ಯರು 'ಪೆರ್ಮಾಡಿ' ಶಕ್ತಿಯೊಂದಿಗೆ ಸೆಣೆಸಿದರು.

## ಸಾಹಿತ್ಯ ಕೃತಿಗಳು

ಶಾಸನದಲ್ಲಿ ಬರುವ 'ವಚಶ್ರೀವಧುಕಾನ್ತ ಸಾಹಿತ್ಯ ಸರೋರುಹ ಮಧುಬ್ರತ' ಎಂಬ ವಿಶೇಷಣವನ್ನು ನೋಡಿದಾಗ ಕೇಶಿರಾಜನು ಕವಿಯೂ ಸಾಹಿತ್ಯಪ್ರಿಯನೂ ಆಗಿದ್ದನೆಂಬುದು ಸ್ಪಷ್ಟ.

'ನಿಚ್ಚಲೆಂಟುಂ ಪದ್ಯಮುಂ ಸೋಮನಾಥಂಗೆ
ಅಚ್ಚರಿಮಿಗಲ್ಕೆ ಪೇಳ್ವ ಶೈವನಾಥಂಗೆ'

ಎಂಬ ಹರಿಹರ ಕವಿಯ ಈ ಮಾತುಗಳು ಸಹ ಶಾಸನದಲ್ಲಿ ಮೂಡಿರುವ ಕೇಶಿರಾಜರ ವಿಶೇಷಣಗಳ ಸತ್ಯತೆಯನ್ನು ಎತ್ತಿಹಿಡಿಯುತ್ತವೆ. ಶರಣಧರ್ಮ ಹಾಗೂ ವಚನಧರ್ಮಗಳಿಗೆ ಮಾರುಹೋದ ಈ ಕವಿಯು ವಚನಗಳ ನಿರೂಪಣೆ ಏನೋ ಎಂಬಂತೆ ರಗಳೆಗಳನ್ನೂ ರಚಿಸಿದ್ದುಂಟು. ಕೆಲವೊಂದು ಸಂದರ್ಭದಲ್ಲಿ ಇದ್ದಕಿದ್ದಂತೆ ನೇರವಾಗಿ ವಚನಗಳನ್ನೇ ಎತ್ತಿಕೊಂಡ

ಈ ಕವಿ ಕೇಶಿರಾಜನ ವಚನಗಳನ್ನು ಬಳಸಿಕೊಂಡಿರಬೇಕು. ಆದರೆ ಅವನೇ ರಚಿಸಿದ ಯಾವ ವಚನವೂ ಇದುವರೆಗೆ ದೊರಕಿರುವುದಿಲ್ಲ. ಶಾಂತಲಿಂಗದೇಶಿಕ ಕವಿಯು ತನ್ನ ಭೈರವೇಶ್ವರ ಕಾವ್ಯದ ಕಥಾಸೂತ್ರರತ್ನಾಕರದಲ್ಲಿ ಕೊಂಡಗುಳಿ ಕೇಶಿರಾಜ ಕಂದವೃತ್ತಗಳಲ್ಲದೇ ರಗಳೆ. ತ್ರಿವಿಧಿ, ದಂಡಕ, ಅಷ್ಟಕ, ಗದ್ಯ, ವಚನಗಳನ್ನು ಬರೆದಿರುತ್ತಾನೆಂದು ಹೇಳಿ ಈತನ ವಿಪುಲ ಸಾಹಿತ್ಯ ರಚನೆಯನ್ನು ಸೂಚಿಸುತ್ತಾನೆ. ಇವನ ಮಾತು ನಿಜವಾದರೆ ಕೇಶಿರಾಜನು ವೀರಶೈವ ಮೊದಲು ಕವಿ ಹೇಗೋ ಹಾಗೆ ವಚನಕಾರರಲ್ಲಿಯೂ ಮೊದಲಿಗನಾಗುತ್ತಾನೆ.

ಕವಿಚರಿತೆಕಾರರು ತಮ್ಮ ಕವಿಚರಿತೆಯ ಮೂರನೇ ಸಂಪುಟದ ಅನುಬಂಧದಲ್ಲಿ ಇದುವರೆಗೂ ಉಕ್ತವಾಗದಿರುವ ಕೆಲವು ಕೃತಿಗಳ ಪಟ್ಟಿಯನ್ನು ಕೊಡುತ್ತಾರೆ. ಅವುಗಳಲ್ಲಿ 'ಕೊಂಡಗುಳಿ ಕೇಶಿರಾಜಯ್ಯಗಳ ವಚನ' ಎಂಬುದು ಒಂದು ಎಂಬ ಮಾತನ್ನು ಗಮನಿಸಬೇಕು.

ಕೇಶಿರಾಜನ ಸಾಹಿತ್ಯಕ ಚಟುವಟಿಕೆಗಳನ್ನು ಹರಿಹರನು ತನ್ನ ರಗಳೆಯಲ್ಲಿ 'ನಿಚ್ಚಲೆಂಟುಂ ಪದ್ಯಮಂ ಸೋಮನಾಥಂಗೆ ........ಪದ್ಯಂಗಳಂ ಶಿವಂಗನುದಿನಂ ಪೇಳುತಂ...ಪಾಡುವ ಪುರಾತನರ ಗೀತದೊಕ್ಕರಗುತಂ...ಶರಣರ ಸುಗೀತಗೋಷ್ಠಿಯೊಳೇನುವರಿಯದಿರೆ...ಮಾತುಮಾತಿಂಗೆ ಪುರಾತನರ ಗೀತವಂಕುರಿಸೆ...ಗೀತಕ್ಕೊಮ್ಮೊಮ್ಮೆ ಪೊಡಮೊಡುತೆ...ಗೀತದಾರತಿಗೋಷ್ಠಿಯಾರೋಗಣೆಯಾಗಿ...ಶಿವಗೀತಾಮೃತ ಶರಧಿಯೊಳವಗಾಹಮಿರ್ದು."

ಹೀಗೆ ಹೇಳಿ ಅವನ ಕಾವ್ಯಪರಿಸರದ ಪರಿಚಯು ಮಾಡಿ ಕೊಡುತ್ತಾನೆ. ಮೇಲಿನ ಈ ಮಾತುಗಳನ್ನು ಗಮನಿಸಿದಾಗ 'ಗೀತ' ಮತ್ತು 'ಪದ್ಯ' ಎಂಬ ಪದ ಪ್ರಯೋಗಗಳುಂಟು. ಈ ಹೇಳಿಕೆಗೆ ಸಾಕ್ಷಿಯಾಗಿ ಈತನ ಐದು ಕೃತಿಗಳು ಮಾತ್ರ ಸಿಕ್ಕಿವೆ. ಬಿಡಿಬಿಡಿಯಾಗಿ ಪ್ರಕಟಗೊಂಡ ಈ ಕೃತಿಗಳನ್ನು ಡಾ। ಎಂ.ಎಂ. ಕಲಬುರ್ಗಿಯುವರು ಒಂದೆಡೆ ಸಂಗ್ರಹಿಸಿ ಸಂಪಾದಿಸಿದ್ದಾರೆ. ಹೆಸರು "ಕೊಂಡಗುಳಿ ಕೇಶಿರಾಜನ ಕೃತಿಗಳು" ಎಂಬುದು.

೧) ಮಂತ್ರಮಹತ್ವದ ಕಂದ: ನೂರಾಹತ್ತು ಕಂದ ಪದ್ಯಗಳನ್ನು ಹೊಂದಿದ ಈ ಕೃತಿಯು ಪ್ರತಿಯೊಂದು ಪದ್ಯವೂ 'ಓಂ ನಮಃಶಿವಾಯು ಎಂಬ ಪದಂ' ಎಂಬ ಮುದ್ರಿಕೆಯಿಂದ ಮುಗಿಯುತ್ತದೆ. ಷಡಕ್ಷರ ಮಂತ್ರಮಹಿಮೆಯು ನಿರೂಪಣೆಯೇ ಈ ಕೃತಿಯು ಮುಖ್ಯ ಉದ್ದೇಶ.

ಆರಕ್ಕರದೀಮಂತ್ರ
ಮೂರುಂಕಣ್ಣಭವನಿಂದ ವೆಗ್ಗಳದೈವಂ
ಬೇರಿಲ್ಲವೆಂದು ಧಾತ್ರಿಗೆ
ಸಾರಿದೆನಾಂ ಕೇಶಿರಾಜದಂಡಾಧೀಶಂ

ಎಂಬ ಪದ್ಯವು ಈ ಕೃತಿಯು ಕೊನೆಯಲ್ಲಿ ಬರುತ್ತದೆ

೨) ಲಿಂಗಸ್ತೋತ್ರದ ಕಂದ-೧ : ನೂರು ಕಂದ ಪದ್ಯಗಳನ್ನೊಳಗೊಂಡ ಈ ಕೃತಿ ಲಿಂಗಮಹತ್ವವನ್ನು, ಶಿವ ಪ್ರಾರ್ಥನೆಯನ್ನೂ ಒಳಗೊಂಡಿದೆ. ಇದಕ್ಕೆ ಇನ್ನೊಂದು ಹೆಸರು 'ಶಿವಪ್ರಾರ್ಥನಾ ಶತಕ' ಎಂದೂ ಉಂಟು.

ಶಿವಯೆಂಬುದು ದಿವ್ಯೌಷಧಿ
ಶಿವಯೆಂಬುದು ಸಕಲಮಂತ್ರಸಾಧನ ಮತ್ತೀ
ಶಿವ ಶಿವ ಶಿವಯೆಂದೆಂಬುದ
ನವರತಮಂ ಪಡೆದೊಡವನ ಜನ್ಮಮೆ ಸಫಲಂ. ॥೧೦॥

ಲಿಂಗವನೆ ನೋಡಿ ಚಿತ್ತಂ
ಪಿಂಗದೆ ತಲ್ಲೀನುವಾಗಿ ಪೆಱತಂ ಮಱೆದಾ
ಸಂಗದೊಳೆ ನಿಂದು ಶಿವನ ವ(ಮ?)
ನಂಗೊಳಿಸುವ ಭಕ್ತಿಯೆನಗೆಂದಾದಪುದೋ ॥೬೫॥

ಮೇಲಿನ ಹೆಸರುಗಳಿಗೆ ಈ ಪದ್ಯಗಳನ್ನು ಗಮನಿಸಬಹುದು.

೩) ಲಿಂಗಸ್ತೋತ್ರದ ಕಂದ-೨:-ನೂರಾಎಂಟು ಕಂದ ಪದ್ಯಗಳನ್ನೊಳಗೊಂಡ ಈ ಕೃತಿಯೂ 'ಲಿಂಗಮಹತ್ವ'ವನ್ನು ಹೇಳುತ್ತದೆ. ಲಿಂಗಸ್ತೋತ್ರದ ಕಂದ-೧ ರಲ್ಲಿಯ ೪೦ ಪದ್ಯಗಳು ಇದರಲ್ಲಿಯೂ ಇರುತ್ತವೆ.

೪) ಶೀಲ ಮಹತ್ವದ ಕಂದ: ಕೇಶಿರಾಜನ ಕೃತಿಗಳಲ್ಲಿ ಇದು ಅಪೂರ್ವವಾದುದು. ೧೦೧ ಕಂದಪದ್ಯಗಳನ್ನು ಒಳಗೊಂಡ ಈ ಕೃತಿ ವೀರಶೈವದ ಆಚಾರಕ್ಕೆ ಸಂಬಂಧಪಟ್ಟ ೬೪ ಶೀಲಗಳನ್ನು ವಿವರಿಸುತ್ತದೆ. ಗುರುಸೇವೆ,ಲಿಂಗಪೂಜೆ, ಜಂಗಮ ದಾಸೋಹ, ಪ್ರಸಾದಸಿದ್ಧಿ, ಕಾಯಕನಿಷ್ಠೆ ಮೊದಲಾದ ವಿಚಾರ ಗಳನ್ನು ತಿಳಿಯಪಡಿಸುವದರಿಂದ ಬಸವಪೂರ್ವದಲ್ಲಿದ್ದ ವೀರ ಶೈವದ ಸ್ವರೂಪವನ್ನು ಈ ಕೃತಿ ಬಿಂಬಿಸುತ್ತದೆ. ಶೀಲ ಮಹತ್ವದ ಕಂದವೆಂದು ಹೆಸರಿಸಿರುವವರು ಈ ಕೃತಿಯ ಸಂಪಾ ದಕರೇ ಆಗಿದ್ದಾರೆ.

೫) ನವರತ್ನಮಾಲಾ: ಸಂಸ್ಕೃತಮಯವಾದ ಇಲ್ಲಿನ ಪ್ರತಿಯೊಂದು ಪದ್ಯಗಳೂ 'ಕಂಡೆರ್ದೆದಣಿದು ಕುಳಿಕೊರ್ೞಿಡಿತೆನ್ನಂ ತರಂಗಂ' ಎಂಬ ವಾಕ್ಯದೊಡನೆ ಮುಕ್ತಾಯಗೊಳ್ಳುತ್ತದೆ. ಶಿವಸ್ತುತಿಯನ್ನೊಳಗೊಂಡ ಒಟ್ಟು ಒಂಭತ್ತು ಪದ್ಯಗಳನ್ನೊಳಗೊಂಡಿದೆ ಈ ಕೃತಿ. ಹರಿಹರ ಕವಿ ಹೇಳುವ 'ನಿಚ್ಚ ಲೆಂಟುಂ ಪದ್ಮಮಂ ಸೋಮನಾಥಂಗೆ' ಎಂಬ ಕೇಶಿರಾಜನ ಲಘು ಸಾಹಿತ್ಯಕ್ಕೆ ಉತ್ಕೃಷ್ಟ ಉದಾಹರಣೆಯಾಗಿದೆ.

ಕೇಶಿರಾಜನು ವೀರಶೈವ ಮೊದಲ ಕವಿಯಾದಂತೆ ವೀರಶೈವ ಶತಕ ಸಾಹಿತ್ಯಕ್ಕೂ ಮೊದಲಿಗನಾಗುತ್ತಾನೆ. 'ನವರತ್ನ ಮಾಲೆ'ಯನ್ನು ಬಿಟ್ಟರೆ ಉಳಿದ ನಾಲ್ಕೂ ಕೃತಿಗಳು ನೂರಕ್ಕಿಂತ ಹೆಚ್ಚಿನ ಪದ್ಯಗಳನ್ನೇ ಹೊಂದಿರುತ್ತವೆ. ಕನ್ನಡ ಸಾಹಿತ್ಯದಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳನ್ನು ನಿರೂಪಿಸುವಂಥ ಶತಕಗಳಿರುವಂತೆಯೇ ಮತ, ಧರ್ಮ, ತತ್ವಗಳನ್ನೂ ನಿರೂಪಿಸುವ ಶತಕಗಳಿವೆ ಎಂಬುದನ್ನು ಕೇಶಿರಾಜನ ಶತಕಗಳಲ್ಲಿ ಕಾಣಬಹುದು. ಮಾನವನಿಗೆ ಅಂಟಿಕೊಳ್ಳುವ ಮೋಹ ಮಾಯೆ-ಭವಪಾಶಗಳು ಷಡಕ್ಷರ ಮಂತ್ರೋಚ್ಚಾರಣೆಯಿಂದ ಹೇಗೆ ದೂರಾಗುತ್ತವೆಂಬ ಮಾತನ್ನು ಸುಂದರವಾಗಿ ಹೇಳುತ್ತಾನೆ.

ತಱಿಯಲ್ ಮೋಹದ ಕೆಚ್ಚಂ
ಪಱಿಯಲ್ ಭವಪಾಶಮಂ ಮನೋಜನ ಬಿಲ್ಲಂ
ಮುಱಿಯಲ್ ಮಾಯೆಯ ಬೇರಂ
ಕೊಱಿಯಲ್ ಜಪಮೋಂ ನಮಃಶಿವಾಯೆಂಬ ಪದಂ

(ಮಂತ್ರಮಹತ್ವದ ಕಂದ, ೧೫)

ಕೇಶಿರಾಜನು ಸಂಸ್ಕೃತ ವೃತ್ತಗಳ ಅನುಕರಣೆ ಮಾಡದೆ (ನವರತ್ನಮಾಲಾ ಹೊರತು ಪಡಿಸಿ) ಕಂದಪದ್ಯದಲ್ಲಿ ಬರೆದದ್ದು ತುಂಬಾ ಗಮನಾರ್ಹವಾಗಿದೆ. ಚಂಪು ಕೃತಿಗಳಲ್ಲಿರುವ ಕಂದಗಳ ಬಿಗಿಬಂಧ ಕೇಶಿರಾಜನ ಕಂದ ಪದ್ಯಗಳಿಗಿಲ್ಲ. ಕೇಶಿರಾಜನ ಕಂದ ಪದ್ಯಗಳು ನಡುಗನ್ನಡ ಭಾಷೆಯನ್ನು ಹೊಂದಿರುವದಲ್ಲದೇ ಛಂದಸ್ಸಿನ ಬಳಕೆ ನಿಯಮಿತವಾಗಿರುವದಿಲ್ಲ. ಅವನು ಬಳಸಿದ ಭಾಷೆಯನ್ನು ಗಮನಿಸಿದಾಗ ಜನಸಾಮಾನ್ಯರಿಗಾಗಿಯೇ ಕೃತಿಗಳನ್ನು ರಚಿಸಿದ್ದಾನೆ ಎಂಬುದು ಸ್ಪಷ್ಟ, ಪಂಡಿತರನ್ನು ಮೆಚ್ಚಿಸಲಿಕ್ಕಲ್ಲ.

ಕವಿಯಾದವನು ತನ್ನ ಅಂತ:ಚಕ್ಷುವಿನಿಂದ ಕಂಡು ಅನುಭವಿಸಿ ಭಾವಕ್ಕೆ ತಕ್ಕ ಭಾಷೆಯನ್ನು ಬಳಸಿ ಅಭಿವ್ಯಕ್ತಗೊಳಿಸಿದಾಗ ಅದಕ್ಕೆ ಸಾಹಿತ್ಯಿಕ ಪಟ್ಟ ದೊರಕುತ್ತದಲ್ಲದೆ ಅದೊಂದು ರಸಘಟ್ಟಿಯಾಗುತ್ತದೆ. ಭಕ್ತಿ ಜ್ಞಾನ ವೈರಾಗ್ಯದಿಂದ ಕೂಡಿದ ಈತನ ಪದ್ಯಗಳು ಕೇವಲ ನೀತಿನಿರೂಪಣೆಯ ಶುಷ್ಕ ಹೇಳಿಕೆಗಳಾಗಿರದೆ ಸಾಹಿತ್ಯದ ಮಾಧುರ್ಯವನ್ನೂ ಒಳಗೊಂಡಿವೆ.

ನೆರೆದಿರ್ದ ಮುಗಿಲ ಮಂಜಿನ
ತೆರಳಿಕೆ ಕುಡಿಮಿಂಚು ಗಾಳಿಗೊಡ್ಡಿದ ಸೊಡರೀ
ಸರಿರವಿದನೆಚ್ಚಿ ಕೆಡದಿರು
ಹರಜಪಮೆಮಗೋಂ ನಮಃಶಿವಾಯೆಂಬ ಪದಂ

(ಮಂತ್ರಮಹತ್ವದ ಕಂದ-೭೬)

ಎಂಬಲ್ಲಿಯ ದೃಷ್ಟಾಂತಗಳು ಕಾವ್ಯಸೌಂದರ್ಯವನ್ನು ಹೆಚ್ಚಿಸಿ ಭಕ್ತಿಯ ನಿರ್ಭರತೆಯನ್ನು ಎತ್ತಿ ತೋರಿಸುತ್ತವೆ.

ಘಟ್ಟದ ಬೆಟ್ಟದ ಗಹ್ವರ
ದಿಟ್ಟೆಡೆ ನಟ್ಟಡವಿಯೊಳಗೆ ಸಕಲಾವಿಷಮುಂ
ಬಿಟ್ಟು ಮನಮುಟ್ಟಿ ದುರಿತ ಘ
ರಟ್ಟಿನ ನೆನೆವೋಂ ನಮಃಶಿವಾಯೆಂಬ ಪದಂ

(ಮಂತ್ರ ಮಹತ್ವದ ಕಂದ–೬೩)

ಎನ್ನ ಧನವೆನ್ನ ಸತಿ ಸುತ
ರೆನ್ನಯ ತನುವೆನ್ನದೆನ್ನದೆಂದೆಂದು ಮಹಾ
ಬಿನ್ನಾಣದೊಳಗೆ ಕಡೆಯುದ
ಮುನ್ನವೆ ನೆನೆಯೋಂ ನಮಃಶಿವಾಯೆಂಬ ಪದಂ

(ಮಂತ್ರಮಹತ್ವದ ಕಂದ-೮೦)

ಈ ಪದ್ಯಗಳಲ್ಲಿ ಬಳಸಿದ ಪ್ರಾಸಾನುಪ್ರಾಸಗಳು, ಭಾವಕ್ಕನುಗುಣವಾದ ಭಾಷೆ ಔಚಿತ್ಯಪೂರ್ಣವಾಗಿರುವದರಿಂದ ತೀವ್ರತರವಾದ ಭಕ್ತಿಯ ಪರಾಕಾಷ್ಠೆಯನ್ನು ಮನಗಾಣಬಹುದು.

ಎನ್ನ ಮನವೆಂಬ ಶುಕನಂ
ನಿನ್ನಗ್ಗದ ಭಕ್ತಿವನಿತೆ ಪಿಡಿದೊಯ್ದು ಶಿವಾ
ಯೆನ್ನೆಂದೋದಿಸಿ ನಿಜಪಾ
ದೋನ್ನತ ಪಂಜರದೊಳೆಂದು ಸೆರೆಯಿಟಪಳೋ

(ಲಿಂಗಸ್ತೋತ್ರದ ಕಂದ–೮೯)

ಇಲ್ಲಿ ಬಳಸಿದ 'ಮನವೆಂಬ ಶುಕ', 'ನಿನ್ನಗ್ಗದ ಭಕ್ತಿವನಿತೆ', 'ಪಾದೋನ್ನತ ಪಂಜರ' ಮುಂತಾದ ಪ್ರತಿಮೆಗಳು ಅರ್ಥಪೂರ್ಣವಾಗಿ ವ್ಯಕ್ತಗೊಂಡಿರುವದರಿಂದಲೂ, ಇಲ್ಲಿ ಕವಿಯ

ಪ್ರಾಮಾಣಿಕವಾದ ಆತ್ಮನಿರೀಕ್ಷೆ ಇರುವವರಿಂದಲೂ ಸಹೃದಯರ ಹೃದಯವನ್ನು ಮುಟ್ಟುತ್ತವೆ.

ಮಾರಮದಹರನೆ ನಿನ್ನಾ
ಕಾರಂ ಸಾನಂದಮಪ್ಪ ಮಚ್ಚಿತ್ತಸುಧಾ
ವಾರಿಧಿಯೊಳಗಗಲದೆ ತಿಳಿ
ನೀರೊಳಗಣ ತಿಂಗಳಂತಿರೆಂದಿರ್ದಪುದೋ
(ಲಿಂಗಸ್ತೋತ್ರದ ಕಂದ–೬೪)

ಕವಿಯು ಮನೋಭಿತ್ತಿಯ ಮೇಲೆ ಮಾಡಿದ ಶಿವನ ಚಿತ್ರವನ್ನು 'ತಿಳಿನೀರೊಳಗಣ ತಿಂಗಳ' ಬಿಂಬಕ್ಕೆ ಹೋಲಿಸಿದ ಈ ಕವಿಯ ಉಪಮಾ ಸಾಮರ್ಥ್ಯ ಅಗಾಧವಾದುದು.

ಹೀಗೆ ಅನೇಕ ಪದ್ಯಗಳನ್ನು ಬರೆದ ಕೇಶಿರಾಜ ಅನುಭಾವಿ ಕವಿಯಾಗಿ ಕನ್ನಡ ಸಾರಸ್ವತ ಪ್ರಪಂಚಕ್ಕೆ ಪರಿಚಿತನಾಗಿದ್ದಾನೆ.

ಬಸವಾದಿ ಶರಣರ ವಚನಗಳೊಂದಿಗೆ ಕೇಶಿರಾಜನ ಈ ಕಂದ ಪದ್ಯಗಳನ್ನು ತಾಳೆಹಿಡಿದು ನೋಡಿದಾಗ ಕೆಲವೊಂದು ಸಾಮ್ಯಗಳು ಕಂಡು ಬರುತ್ತವೆ. ಭಕ್ತಿ, ಭಾವ, ಭಾಷೆ ಹಾಗೂ ವಸ್ತುವಿನ ಬಳಕೆಗಳು ಈ ಮಾತನ್ನು ಸ್ಪಷ್ಟಪಡಿಸುತ್ತವೆ. 'ವಚನಸಾಹಿತ್ಯ' ಪ್ರಕಾರ ಹುಟ್ಟಲಿಕ್ಕೆ ಹಿನ್ನೆಲೆಯಾಗಿ ಕೇಶಿರಾಜನ ಕಂದ ಪದ್ಯಗಳು ನಿದರ್ಶನವೊದಗಿಸುತ್ತವೆ.

೧) ಜರೆಮರಣ ದುರಿತ ಕೋಟಲೆ
ನೆರೆದಿಹ ನಿಜಭವ ಶರೀರ ಕರ್ಮಾಂತರದೊಳ್
ಪರವಶದಗ್ಗದ ಕುಲಗಳ
ಪರಿಹರಿಸುವುದೋಂ ನಮಃಶಿವಾಯೆಂಬ ಪದಂ
(ಕೇಶಿರಾಜ : ಮಂತ್ರಮಹತ್ವದ ಕಂದ–೧೬)

ಭವಬಂಧನ ದುರಿತಂಗಳ ಗೆಲುವೊಡೆ ಓಂ ನಮಃ
ಶಿವಾಯ ಶರಣೆಂದೊಡೆ ಸಾಲದೆ

(ಬಸವಣ್ಣ)

೨) ಕರಿಯಂಕುಶಕಂಜುಗುಮಾ
ಗಿರಿಯಂಜುಗು ಕುಲಿಶಕ್ಕೆ ತಮಂಧಂ ಪರಿಗುಂ
ಖರಕರ ಕಿರಣಕ್ಕೆಮಗಂ
ಪರಿವೊಡೆ ಪಾಪೋಂ ನಮಃಶಿವಾಯೆಂಬ ಪದಂ

(ಕೇಶಿರಾಜ : ಮಂ. ಮ. ಕಂ.–೯೪)

ಕರಿಯಂಜುವುದಂಕುಶಕ್ಕಯ್ಯಾ
ಗಿರಿಯಂಜುವುದು ಕುಲಿಶಕ್ಕಯ್ಯಾ
ತಮಂಧವಂಜುವುದು ಜ್ಯೋತಿಗಯ್ಯಾ
ಕಾನನವಂಜುವುದು ಬೇಗೆಗಯ್ಯಾ
ಪಂಚಮಹಾಪಾತಕವಂಜುವುದು ಕೂಡಲಸಂಗನ

ನಾಮಕ್ಕಯ್ಯಾ

(ಬಸವಣ್ಣ)

೩) ನೆರೆದಿರ್ದ ಮುಗಿಲ ಮಂಜಿನ
ತೆರಳಿಕೆ ಕುಡಿಮಿಂಚು ಗಾಳಿಗೊಡ್ಡಿದ ಸೊಡರೀ
ಸರಿರವಿದ ನೆಚ್ಚಿ ಕೆಡದಿರು
ಹರಜಪಮೆಮಗೋಂ ನಮಃ ಶಿವಾಯೆಂಬ ಪದಂ

(ಕೇಶಿರಾಜ : ಮಂ. ಮ. ಕಂ–೭೬)

ಸಂಸಾರವೆಂಬುದೊಂದು ಗಾಳಿಯ ಸೊಡರು
ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ
ಇದು ನೆಚ್ಚಿ ಕೆಡಬೇಡ ಸಿರಿಯೆಂಬುದ

ಮಱೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ

(ಬಸವಣ್ಣ)

೪) ಮೊಗದ ತೆರೆ ನೆನೆದು ಸೆರೆಗಳ್
ಬಿಗಿದು ಶಿರಂ ನಡುಗಿ ಪಿಡಿವ ನಡೆವಾ ಕೈಕಾಲ್
ಮಿಗೆಯುಡುಗದೆ ಜವ್ವನಮುಂ
ಜಗುಳದೆ ನೆನೆಯೋಂ ನಮಃಶಿವಾಯೆಂಬ ಪದಂ

(ಕೇಶಿರಾಜ : ಮಂ. ಮ. ಕಂ–೬೭)

ನೆರೆಕೆನ್ನೆಗೆ ತೆರೆಗಲ್ಲಕೆ ಶರೀರ ಗೂಡುವೋಗದ ಮುನ್ನ
ಹಲ್ಲು ಹೋಗಿ ಬೆನ್ನುಬಾಗಿ ಅನ್ಯರಿಗೆ ಹಂಗಾಗದ ಮುನ್ನ
ಕಾಲಮೇಲೆ ಕೈಯನೂರಿ ಕೋಲಹಿಡಿಯದ ಮುನ್ನ
ಮುಪ್ಪಿಂದೊಪ್ಪವಳಿಯದ ಮುನ್ನ
ಮೃತ್ಯು ಮುಟ್ಟದ ಮುನ್ನ
ಪೂಜಿಸು ನಮ್ಮ ಕೂಡಲಸಂಗಮದೇವನ

(ಬಸವಣ್ಣ)

೫) ಎನ್ನ ಮನವೆಂಬ ಶುಕನಂ
ನಿನ್ನಗ್ಗದ ಭಕ್ತಿವನಿತೆ ಪಿಡಿದೊಯ್ದು ಶಿವಾ
ಯೆನ್ನೆಂದೋದಿಸಿ ನಿಜಪಾ
ದೋನ್ನತ ಪಂಜರದೊಳೆಂದು ಸೆಱೆಯಿಟ್ಟಪಳೋ

(ಕೇಶಿರಾಜ : ಲಿಂ. ಸ್ತೋ.ಕಂ–೮೯)

ನರವಿಂಧ್ಯದೊಳಗೆನ್ನ ಹುಲಗಿಣಿಯುಮಾಡಿ
ಸಲಹುತ್ತ ಶಿವ ಶಿವಾಯೆಂದೆನಿಸಯ್ಯ

(ಬಸವಣ್ಣ)

೬) ಲಿಂಗಪ್ರಸಾದವಲ್ಲದೆ
ನುಂಗಿದುಂ(ವು) ಕಿಲ್ಬಿಷಂಗಳದು ಕಾರಣದಿಂ
ಲಿಂಗಮುಖವಾಗಿ ಕೊಂಬುದು
ಲಿಂಗದದಾ ತನುವದಾಗಿ ಲಿಂಗದ ಶೇಷಂ
(ಕೇಶಿರಾಜ: ಶೀ. ಮು. ಕಂ–೧೩)
ಲಿಂಗವಿಲ್ಲದೆ ಉಗುಳು ನುಂಗಿದಡೆ
ಅಂದಂದಿಗೆ ಕಿಲ್ಬಿಷವಯ್ಯಾ.
(ಬಸವಣ್ಣ)

೭) ಕಾಮಿಸಿತು ಕಾಯಭೋಗಂ
ಕಾಮಿಸದದು ಲಿಂಗ ಭೋಗವೆಂದದನಱಿದುಂ
ಕಾಮಿತ ಕಲ್ಪಿತವಳಿದುಂ
ಪ್ರೇಮದಲಱುವತ್ತನೆಯದು ಶೀಲವದೆನಿಕುಂ.
(ಕೇಶಿರಾಜ ಶೀ. ಮು. ಕಂ–೮೨)
ಬಯಸಿ ಬಂದುದು ಅಂಗಭೋಗ
ಬಯಸದೇ ಬಂದುದು ಲಿಂಗಭೋಗ
(ಚೆನ್ನಬಸವಣ್ಣ)

ಮೇಲಿನ ಉದಾಹರಣೆಗಳು ಬಸವಾದಿ ಶರಣರ ಮೇಲೆ ಬೀರಿದ ದಟ್ಟ ಪ್ರಭಾವಗಳು. ಹೀಗೆ ಕೇಶಿರಾಜನು ಕನ್ನಡ ಸಾಹಿತ್ಯದಲ್ಲಿ ಭಕ್ತಿ ಸಾಹಿತ್ಯ ಬರೆದ ಮೊದಲ ಕವಿ. ಕನ್ನಡ ಸಾಹಿತ್ಯದ 'ವೀರಯುಗ'ವನ್ನು ಹಿಂದೆ ಸರಿಸಿ ಮೂಡಿನಿಂತ 'ಭಕ್ತಿಯುಗ'ಕ್ಕೆ ಈತನು ಅರುಣೋದಯದ ಸೂರ್ಯನಾಗಿ ತೋರುತ್ತಾನೆ"[೬] ಎಂಬ ಮಾತು ಈತನ ಕೃತಿಗಳ ಅಭ್ಯಾಸ ದಿಂದ ಸ್ಪಷ್ಟವಾಗುತ್ತದೆ.

# ತತ್ತ್ವ ವಿವೇಚನೆ

ಮುಖ್ಯವಾಗಿ ಕೇಶಿರಾಜನ ಧರ್ಮವಾವುದು ಎಂಬು ದನ್ನು ಅರಿತುಕೊಳ್ಳಲು ಪ್ರಯತ್ನಿಸಬೇಕು. "ಅವನ ಕಾಲದ ವೀರಶೈವ ಧರ್ಮದ ಬಗ್ಗೆ ಮಾತನಾಡುವುದು ಅಷ್ಟು ಸುಲಭ ವಲ್ಲ."[೭] ಅವನ ಕೃತಿಗಳಲ್ಲಿ 'ವೀರಶೈವ' ಹಾಗೂ 'ಲಿಂಗಾಯತ' ವೆಂಬ ಪದಗಳು ಪ್ರಯೋಗಗೊಂಡಿವೆ.

"ವರವೀರಶೈವ [ಸಿದ್ಧವ]
ಪರಿಯಾಯಗಳಿಂದಲಱಿದು ಗುರುಮಹಿಮೆಗಳಂ"

(ಶೀಲಮಹತ್ವದ ಕಂದ-೧)

ಹಾಗೂ

"ಅಂಗದಲಿ ಲಕ್ಷಣಾನ್ವಿತ
ಲಿಂಗದ ಮುದ್ರೆಯನು ವತ್ಸಗಂ ಧೇನುವಿಗಂ
ಅಂಗೀಕರಿಪುದು ಶೀಲವ
ಲಿಂಗಾಯತವಂತದೀಗ ಹನ್ನೊಂದನೆಯದು

(ಶೀಲಮಹತ್ವದ ಕಂದ-೨)

ಕೇಶಿರಾಜನ ಕೃತಿಗಳಲ್ಲಿ ವ್ಯಕ್ತವಾಗಿರುವ 'ವೀರಶೈವ' ಹಾಗೂ 'ಲಿಂಗಾಯತ' ಪದ ಪ್ರಯೋಗಗಳನ್ನು ಗಮನಿಸಿದರೆ ಬಸವಾದಿ ಶರಣರ ವೀರಶೈವಕ್ಕೆ ಸಮೀಪದ ತತ್ವಗಳಿದ್ದು ಕಾಣುತ್ತವೆ. ಈ ಆವ್ಯರ ಕಾಲದಲ್ಲಿ ಶೈವ ಪ್ರಭೇದಗಳಾದ ನಕುಲೀಶ ಪಾಶುಪತ, (ಕಾಳಾಮುಖ) ಶಾಖೆಗಳಿದ್ದವೆಂಬುದು ಶಾಸನಗಳಿಂದ ತಿಳಿಯು ತ್ತದೆ. ಕೇಶಿರಾಜನ ತಂದೆ ನಿಂಬಣಯ್ಯನು ಕಾಳಾಮುಖ ಸನ್ಯಾ ಸಿಯೊಬ್ಬನಿಗೆ ದತ್ತಿಕೊಟ್ಟಿರುವ ವಿಷಯ ತಿಳಿದು ಬರುತ್ತದೆ.

ನೊಸಲಲಿ ಮೈಯಲಿ ಭಸ್ಮಂ
ಅಸಮಾಕ್ಷನ ನೆನಹು ಮುಖ [ದಿ] ಗಳದರಿ ಲಿಂಗಂ
ಎಸೆ [ವಾ] ರುದ್ರಾಕ್ಷಿಯಿರಲು
ಅಸಮಾಕ್ಷನ್ ಪಂಚವದನ ಪರಶಿವನೆಂಬೆಂ
(ಶೀ. ಮ. ಕಂ-೮)

ಇಲ್ಲಿನ ಆಚಾರ ಹಾಗೂ ಲಾಂಛನಗಳನ್ನು ಗಮನಿಸಿದಾಗ ಪಾಶು ಪತ ಕ್ರಿಯೆಗಳೆಂದೆನಿಸುತ್ತವೆ. ದಿ. ಡಾ। ಬಿ. ಜಿ. ಎಲ್. ಸ್ವಾಮಿಯವರು ತಮ್ಮ ಈಚಿನ ಪ್ರಬಂಧದಲ್ಲಿ ಜೇಡರ ದಾಸಿಮಯ್ಯನ ಮತ ಪಾಶುಪತವಾಗಿತ್ತೆಂಬುದನ್ನು ಸೋದಾ ರಣವಾಗಿ ಪ್ರತಿಪಾದಿಸಿದ್ದಾರೆ.[೮] ಇವರ ಅಭಿಪ್ರಾಯವನ್ನು ವಿದ್ವಾಂಸರೂ ಅನುಮೋದಿಸಿದ್ದಾರೆ. ಹೀಗೆ ಆದ್ಯರ ಯುಗ ದಲ್ಲಿ ಶೈವಪ್ರಭೇದವಾದ ನಕುಲೀಶ, ಪಾಶುಪತ, ಕಾಳಾಮುಖ ದಂಥ ಶಾಖೆಗಳಿದ್ದವು. ಈಗ 'ವೀರ'ವತ್ತಾದ ಆಚರಣೆಯ ಶೈವವೊಂದು ಅಂದು ರೂಪ ಪಡೆಯುತ್ತಲಿತ್ತು. ಇದನ್ನೇ 'ವೀರಶೈವ' ಎಂಬ ಹೆಸರಿನಿಂದ ಬಸವಾದಿ ಶರಣರು ಸ್ವೀಕರಿಸಿರ ಬಹುದೆಂಬ ಭಾವನೆ ಮೂಡುತ್ತದೆ.

ಈ ಕೃತಿಗಳನ್ನು ಅಭ್ಯಸಿಸುವಾಗ ಆದ್ಯರ ಕಾಲದಲ್ಲಿ ಅಷ್ಟಾ ವರಣ ಪ್ರಧಾನವಾಗಿದ್ದದ್ದು ಸ್ಪಷ್ಟವಾಗುತ್ತದೆ. ಗುರುಲಿಂಗ ಜಂಗಮ, ಪ್ರಸಾದಪಾದೋದಕ, ವಿಭೂತಿರುದ್ರಾಕ್ಷಿ ಹಾಗೂ ಮಂತ್ರಗಳ ಮಹತ್ವನ್ನು ಕೇಶಿರಾಜನು ಕಂಡುಕೊಂಡಿದ್ದಾನೆ.

೧) **ಗುರು** : ಅಷ್ಟಾವರ್ಣದ ಮೊದಲಸ್ಥಾನ ಗುರು ವಿನದಾಗಿದೆ. ಗುರುವಿಗೆ ಮೇಲಾದ ಮಹತಿ ನೀಡುವುದು

ವೀರಶೈವ ಲಕ್ಷಣಗಳಲ್ಲಿ ಒಂದು. ಆತನು ಪರಬ್ರಹ್ಮಸ್ವರೂಪಿ. ಭವಿತನವನ್ನು ಹೋಗಲಾಡಿಸಿ ಭಕ್ತನನ್ನಾಗಿಸುವ ಮಣಿಹ ಅವನದಾಗಿದೆ. ಆತನ ಕರುಣೆಗಾಗಿ ಕೇಶಿರಾಜ–

ಗುರುವೇ ಪ್ರಸನ್ನ ಗುರುವೇ
ಗುರುವೇ ಶಿವಾಧಿಕ್ಯ ತ್ರಿವಿಧಮಲಹರ ಗುರುವೇ
ಗುರುವೇ ತ್ರಿಲಿಂಗಧಾರಣ
ಗುರುವೆ ಮಹಾಗುರುವೆಯೆಂಬನೇ ಗುರುಭಕ್ತಂ
(ಶೀ. ಮ. ಕಂ. ೨)

ಹಾಗೂ

ವರ ವೀರಶೈವ [ಸಿದ್ಧವ]
ಪರಿಯಾಯಗಳಿಂದಲಱಿದು ಗುರುಮಹಿಮೆಗಳಂ
ಕರುಣದಲಿ ಪಡೆದು ನಡೆವಂ
ಗುರುಭಕ್ತಂ ಗುರುವಿನಲ್ಲಿ ಬೆರೆಸಿಹ ಮುಕ್ತಂ
(ಶೀ. ಮ ಕಂ–೧)

ಎಂದು ಹೇಳುತ್ತ ಗುರುವಿನ ಆಧಿಕ್ಯವನ್ನು ಎತ್ತಿಹಿಡಿದಿದ್ದಾನೆ.

೨) **ಲಿಂಗ** : ವೀರಶೈವದಲ್ಲಿ ಲಿಂಗ ಪ್ರಾಣಕ್ಕೆಪ್ರಾಣ. ಅದೊಂದು ಪರಮ ಪರಂಜ್ಯೋತಿ ಸ್ವರೂಪ. ಅಂಥ ಸ್ವರೂಪ ಕುರಿತು–

ಲಿಂಗವನೆ ನೋಡಿ ಚಿತ್ತಂ
ಪಿಂಗದೆ ತಲ್ಲೀಯಮಾಗಿ ಪೆಱತಂ ಮಾಱದಾ
ಸಂಗದೊಳೆ ನಿಂದು ಶಿವನ ವ (ಮ ?)
ನಂಗೊಳಿಸುವ ಭಕ್ತಿಯೆನಗದೆಂದಾದಪುದೋ
(ಲಿಂ. ಸ್ತೋ. ಕಂ. ೬೫)

ಎಂದು ಹಂಬಲಿಸುವ ಕೇಶಿರಾಜ ಲಿಂಗಪ್ರಸಾದವಲ್ಲದೆ ಮತ್ತೊಂ-ದಕ್ಕೆ ಅವನ ಮನ ಎಳಿಸಲಾರದು.

ಲಿಂಗಪ್ರಸಾದವಲ್ಲದೆ
ನುಂಗಿದುಂ[ವು] ಕಿಲ್ಬಿಷಂಗಳದು ಕಾರಣದಿಂ
ಲಿಂಗ ಮುಖನಾಗಿ ಕೊಂಬುದು
ಲಿಂಗದದಾ ತನುವದಾಗಿ ಲಿಂಗದ ಶೇಷಂ

(ಶೀ. ಮು. ಕಂ–೧೩)

ಲಿಂಗದ ಮಹತಿಯನ್ನು ಸಾರಲೋಸುಗ ಲಿಂಗಮಹತ್ವದ ಕಂದ ಎಂಬ ಕೃತಿಯನ್ನೇ ಕೇಶಿರಾಜ ರಚಿಸಿರುತ್ತಾನೆ.

೩) **ಜಂಗಮ :** ಅಷ್ಟಾವರ್ಣದಲ್ಲಿ ಮೂರನೆಯದು ಜಂಗಮಸ್ಥಾನ. ಒಂದೇ ಪರಬ್ರಹ್ಮನ ಮೂರು ಮುಖಗಳಲ್ಲಿ ಜಂಗಮ ಮುಖವೂ ಒಂದು.

ತನಗೆಂದು ಅಡಿಗೆ ಮಾಡದೆ
ಮನೆಯವರಿಗೆ ಮಾಡು ಎಂಬ ಮಾತನ[ದ]ಳಿಟುಂ
ಘನಲಿಂಗ ಜಂಗಮಕ್ಕೆಂ
ದನುವಾಗಿಯೆ ಮಾಡಿಸುವುದು ಜಂಗಮ ಭಕ್ತಂ

(ಶೀ. ಮು. ಕಂ–೧೦)

ಮತ್ತು

ಬಳಲಿದಿರಿ ಜೀಯ ಕರ್ಮವ
ತೊಳೆಯಲಿಕಂ ಬಂದಿರೆನ್ನ ಭಾಗ್ಯದೊಳೆಂದುಂ
ಬಳಿ[ಸಂ]ದು ಕಿಂಕಿಲದಲುಂ
ಎಳಸಿರಲು ಜಂಗಮದಲ್ಲಿ ಭಕ್ತಿಯದೆಂದುಂ

(ಶೀ. ಮು. ಕಂ–೧೧)

ಮುಂತಾದ ಪದ್ಯಗಳಲ್ಲಿ ಕೇಶಿರಾಜನ ಜಂಗಮಪ್ರೇಮವು ಪ್ರದರ್ಶಿತವಾಗುತ್ತದೆ.

೪ ಮತ್ತು ೫) **ಪಾದೋದಕ ಪ್ರಸಾದ :** ಅಷ್ಟಾವರ್ಣದ ಮೊದಲಿನ ಮೂರು ತತ್ವಗಳಾದ ಗುರುಲಿಂಗ ಜಂಗಮದ ಕರುಣೆಯೇ ಪ್ರಸಾದ ಮತ್ತು ಪಾದೋದಕ. ತನು ಮನಧನವನ್ನು ಈ ತ್ರಿಮೂರ್ತಿಗಳಿಗೆ ಅರ್ಪಿಸಿ ಉಣಬೇಕು ಇಲ್ಲವಾದರೆ ಅದು ಕಿಲ್ಬಿಷವಾದುದೆಂದು ತನ್ನ ಕೃತಿಗಳಲ್ಲಿ ಹೇಳಿದ್ದಾನೆ.

ಏಕಾದಶ ಪ್ರಸಾದಂ
ಬೇಕಾ ಗೌರವವು ಲಿಂಗಜಂಗಮಭಾಗಂ
ಬೇಕಾ ಭಕ್ತಿ ವಿವಾಹಂ
ಬೇಕಾ ದಶಪಾ[ದೋ]ದಕ ವ್ರತಗಳಿವಾಱುಂ

(ಶೀ. ಮ. ೩೦-೯೨)

ಭಕ್ತನಾದವನು ಪಾದೋದಕ ಪ್ರಸಾದವನ್ನು ಸ್ವೀಕರಿಸಿ ತನ್ನ ದೇಹವನ್ನು ನಿರ್ಮಲಗೊಳಿಸಿಕೊಳ್ಳುತ್ತಾನೆ.

೬) **ವಿಭೂತಿ :** ಅಷ್ಟಾವರ್ಣಗಳಲ್ಲಿ ಭಸ್ಮಕ್ಕೆ ಮೇಲಾದ ಸ್ಥಾನವುಂಟು. ಭಕ್ತರಾದವರು ಶ್ರದ್ಧೆಯಿಂದ ಭಸ್ಮಧರಿಸಬೇಕು. ಇದರಿಂದ ಭವಬಾಧೆಗಳು ತೊಲಗುತ್ತವೆ.

'ನೊಸಲಲಿ ಮೈಯುಲಿ ಭಸ್ಮಂ' ಧರಿಸಬೇಕೆಂದು ಕೇಶಿರಾಜ ಸೂಚಿಸುತ್ತಾನೆ.

೭) **ರುದ್ರಾಕ್ಷಿ :** 'ಎಸೆವಾರುದ್ರಾಕ್ಷಿಯಿರಲು
ಅಸಮಾಕ್ಷನ್ ಪಂಚವದನ ಪರಶಿವನೆಂಬೆಂ'

ಎಂದು ಏಳನೇ ಆವರಣವಾದ ರುದ್ರಾಕ್ಷಿ ಕುರಿತು ಹೇಳುತ್ತಾನೆ. ರುದ್ರಾಕ್ಷಿಯು ಪರಶಿವನ ಕಿಡಿಗಣ್ಣುಗಳೆಂಬ ನಂಬಿಕೆ ಪುರಾತನ ಕಾಲದಿಂದಲೂ ಇದೆ. ಇದನ್ನು ಧರಿಸಿದರೆ ದೇಹಕ್ಕೆ ಪಾವಿತ್ರ್ಯ ವುಂಟಾಗುತ್ತದೆ. ಇಂಥವರನ್ನು ಕೇಶಿರಾಜ ಸಾಕ್ಷಾತ್ ಪರಶಿವ ನೆಂದೇ ಕರೆದಿದ್ದಾನೆ.

೮) **ಮಂತ್ರ** : ಕೊನೆಯ ಆವರಣವೇ ಮಂತ್ರ. 'ಮಂತ್ರ ಮಹತ್ವದ' ಕಂದ ಎಂಬ ಕೃತಿಯನ್ನೇ ಕೇಶಿರಾಜ ರಚಿಸಿದ್ದಾನೆ. ಮಂತ್ರ ಭಕ್ತನಾದವನಿಗೆ ಪಂಚಪ್ರಾಣ. ಅದು ಪಂಚಾಕ್ಷರಿ ಮಂತ್ರವಾಗಿರಬಹುದು ಇಲ್ಲವೆ ಷಡಕ್ಷರಿ ಮಂತ್ರವಾಗಿರಬಹುದು. ಕೋಟಿಪಾಪಗಳು ಕೂಡ ಮಂತ್ರೋಚ್ಚಾರಣೆಯಿಂದ ದೂರವಾಗುತ್ತವೆ ಎಂಬ ಮಾತನ್ನು ಕೇಶಿರಾಜ ಹೀಗೆ ಹೇಳುತ್ತಾನೆ.

ಕೋಟಿ ಜಪಂ ಕೋಟಿ ತಪಂ
ಕೋಟಿ ಮಹಾದಾನಧರ್ಮ ಪರಹಿತ ಚರಿತಂ
ಕೋಟ್ಯಂತರ ಪಾಪಂಗಳ
ದಾಟಿಪ ಜಪವೋಂ ನಮಃಶಿವಾಯೆಂಬ ಪದಂ

(ಮಂ. ಮ. ಕಂ-೪)

ಮೇಲಿನ ತತ್ವಗಳಲ್ಲದೇ ಈತನ ಕೃತಿಗಳಲ್ಲಿ ಕಾಯಕ ಮುಂತಾದ ತತ್ತ್ವಗಳೂ ಎದ್ದು ತೋರುತ್ತವೆ.

ಆವ ಕೆಲಸಗಳ ಮಾಡಲು
ದೇವನ ಮುಖಕದನು ಸವೆಸಲದು ಕರ ಲೇಸುಂ
ಆವ ಸೇವೆಗಳ ಮಾಡಲು

ದೇವನದೆಂದೆಂಬನಾವನವನದು ಕಾಯಕವುಂ.
(ಶೀ. ಮು. ೬೦-೯೮)

ಯಾವ ಕೆಲಸವನ್ನೇ ಮಾಡಲಿ ಯಾವತರದ ಸೇವೆಯೇ ಆಗಲಿ ಅದು ದೇವಕಾರ್ಯವೆಂದೇ ಭಾವಿಸಬೇಕು. ಅಂದರೆ ಅದು ಪವಿತ್ರವಾದಂಥದ್ದಾಗಿರುತ್ತದೆ. ಅಂಥ ಕಾರ್ಯವೇ ಶರಣರ ಕಾಯಕವೆಂದೆನಿಸಿಕೊಳ್ಳುತ್ತದೆ ಎಂದು ಕೇಶಿರಾಜನ ಅಭಿಮತ. ಕಾಯಕದಲ್ಲಿಯೇ ಪರಶಿವನನ್ನು ಕಾಣುವ ದೃಷ್ಟಿ ಅವನದಾಗಿದೆ.

## ಅಡಿ ಟಿಪ್ಪಣಿ

೧) ಡಾ। ಎಂ. ಎಂ. ಕಲಬುರ್ಗಿ–ಪ್ರಸ್ತಾವನೆ : "ಕೊಂಡಗುಳಿ ಕೇಶಿರಾಜನ ಕೃತಿಗಳು".

೨) ಡಾ। ಎಂ. ಚಿದಾನಂದಮೂರ್ತಿ-"ಕೊಂಡಗುಳಿ ಕೇಶಿರಾಜ" "ಬಸವಮಾರ್ಗ". ಸಂಪುಟ–೨

೩) ಫ. ಗು. ಹಳಕಟ್ಟಿ–ಹರಿಹರನ ರಗಳೆಗಳು 'ಕೇಶಿರಾಜ ದಣ್ಣಾಯಕರ ರಗಳೆ'

೪) ಡಾ। ಎಂ. ಎಂ. ಕಲಬುರ್ಗಿ–ಪ್ರಸ್ತಾವನೆ "ಕೊಂಡಗುಳಿ ಕೇಶಿರಾಜನ ಕೃತಿಗಳು"

೫) I ಡಾ। ಎಂ. ಚಿದಾನಂದಮೂರ್ತಿ- "ವಚನ ಸಾಹಿತ್ಯ" ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ. ಸಂಪುಟ–೫

II) ಡಾ। ಎಂ. ಎಂ. ಕಲಬುರ್ಗಿ-ಪ್ರಸ್ತಾವನೆ. "ಕೊಂಡಗುಳಿ ಕೇಶಿರಾಜನ ಕೃತಿಗಳು"

೬) ಡಾ। ಎಂ. ಎಂ. ಕಲಬುರ್ಗಿ-ಪ್ರಸ್ತಾವನೆ "ಕೊಂಡಗುಳಿ ಕೇಶಿರಾಜನ ಕೃತಿಗಳು"

೭) ಡಾ। ಎಂ. ಚಿದಾನಂದಮೂರ್ತಿ–"ಕೊಂಡಗುಳಿ ಕೇಶಿರಾಜ" ಬಸವಮಾರ್ಗ ಸಂಪುಟ–೨

೮) ದಿ. ಡಾ। ಬಿ. ಜಿ. ಎಲ್. ಸ್ವಾಮಿ–"ಜೇಡರದಾಸಿಮಯ್ಯ" ಬಸವಮಾರ್ಗ ಸಂಪುಟ–೨.

# ಅನುಬಂಧ

# ಕಲ್ಯಾಣದ ಚಾಳುಕ್ಯ ವಂಶಾವಳಿ

೧ ಎರಡನೆಯ ತೈಲಪ (ಕ್ರಿ. ಶ. ೯೭೩-೯೭)

೨ ಸತ್ಯಾಶ್ರಯ (೯೯೭-೧೦೦೮) — ದಶವರ್ಮ

೩ ಐದನೆಯ ವಿಕ್ರಮಾದಿತ್ಯ (೧೦೦೮-೧೫) — ೪ ಅಯ್ಯಣ (೧೦೧೫) — ೫ ಒಂದನೆಯ ಜಗದೇಕಮಲ್ಲ (ಎರಡನೆಯ ಜಯಸಿಂಹ ೧೦೧೫-೪೩)

೬ ಒಂದನೆಯ ಸೋಮೇಶ್ವರ (೧೦೪೩-೬೮) — ಮೂರನೆಯ ಜಯಸಿಂಹ

೭ ಎರಡನೆಯ ಸೋಮೇಶ್ವರ (೧೦೬೮-೭೬) — ೮ ಆರನೆಯ ವಿಕ್ರಮಾದಿತ್ಯ (೧೦೭೬-೧೧೨೭) — ನಾಲ್ಕನೆಯ ಜಯಸಿಂಹ — ಕೀರ್ತಿವರ್ಮ

ಮಲ್ಲಿಕಾರ್ಜುನ — ೯ ಮೂರನೆಯ ಸೋಮೇಶ್ವರ (೧೧೨೭-೩೮) — ಜಯಕರ್ಣ — ತೈಲಪ

೧೦ ಎರಡನೆಯ ಜಗದೇಕಮಲ್ಲ (೧೧೩೮-೪೯) — ೧೧ ಮೂರನೆಯ ತೈಲಪ (೧೧೪೯-೬೨)
(ಕ್ರಿ. ಶ. ೧೧೬೨ ರಿಂದ ೧೧೮೪ರ ವರೆಗೆ ಕಲ್ಯಾಣದ ಕಳಚೂರ್ಯರು ಆಳ್ವಿಕೆ ನಡೆಸಿದರು.)

೧೨ ನಾಲ್ಕನೆಯ ಸೋಮೇಶ್ವರ (೧೧೮೪-೮೯)

# ಕೇಶಿರಾಜ ದಂಡಾಧೀಶನ ಶಾಸನಗಳು

ಕೊಂಡಗುಳಿ, ಸಿಂದಗಿ ತಾಲೂಕು, ವಿಜಾಪುರ ಜಿಲ್ಲೆ
ಕಲ್ಯಾಣ ಚಾಲುಕ್ಯ- ತ್ರಿಭುವನಮಲ್ಲ (ವಿಕ್ರಮಾದಿತ್ಯ VI),
ಕ್ರಿ. ಶ. ೧೧೦೭

[SII. XX No. 69]

ಮೊದಲನೆಯ ತುಂಡು

೧. [ಓಂ ನಮಃ] ಶಿವಾಯ॥ ನಮ.........
೨–೫ ಅಳಿಸಿ ಹೋಗಿವೆ
೬. ಗಳುರ್ವ್ವಿಗೆ ಮ...[ಸಿದ]ನಾ ನ್ರಿಪೋತ್ತನಿಂತ್ರೈಳೋ
೭. ಕ್ಷಮಲ್ಲನಾಹವ ಮಲ್ಲಂ॥ ಸ್ವಸ್ತಿ ಸಮಸ್ತ
ಭುವನಾಶ್ರಯಂಶ್ರೀ
೮. ಪ್ರಿಥ್ವಿವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪ
೯. ರಮಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾ
೧೦. ಭರಣಂ ಶ್ರೀಮತ್ರಿಭುವನಮಲ್ಲದೇವರ ವಿಜಯರಾ
೧೧. ಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನ ಮಾ
೧೨. ಚಂದ್ರಾರ್ಕ್ಕ ತಾರಂಬರಂ ಸಲುತ್ತಂ ಕಲ್ಯಾಣಪುರದ
೧೩. ನೆಲೆವೀಡಿನೊಳ್ಸುಖ ಸಂಕಥಾ ವಿನೋದದಿಂ ರಾಜ್ಯಂಗೆ
೧೪. ಯ್ಯುತ್ತಮಿರೆ ತತ್ಪಾದಪದ್ಮೋಪಜೀವಿ ಸಮಧಿಗತ
೧೫. ಪಞ್ಚ ಮಹಾಶಬ್ದ ಮಹಾ ಸಾಮನ್ತಾಧಿಪ
೧೬. ಶ್ರಿಮಹಾ ಪ್ರಚಣ್ಡ ದಣ್ಣನಾಯಕ[ಂ]ವಿಬ್ಧವರ
೧೭. ದಾಯಕ ಗೋತ್ರ ಪವಿತ್ರ ಸುಜನೈಕ
೧೮. ಮಿತ್ರ ಅಭಿಮಾನಮನ್ದರ ವಿಭವಪುರಂದರ ಸರಸ್ವತೀಗಣ

೧೯. ಲಲಾಟಪಟ್ಟ ಕನ್ನಕೈರದಿಶಾಪಟ್ಟ ವಾಜಿಕುಳಾಂ
೨೦. ಬರದ್ಯುಮಣಿ ಬನ್ಧುಜನ ಚಿನ್ತಾ[ಮ*] ಣಿ ಶ್ರೀ
೨೧. ಮತ್ರಿಭುವನಮಲ್ಲದೇವ ಪದಾರಾಧಕಂ ಪ....
೨೨. ಕನಾಮಾದಿ ಸಮಸ್ತ ಪ್ರಶಸ್ತಿ ಸಹಿತ..
೨೩. ಮನುಮಹಾಪ್ರಧಾನಂ ಮನೆವರ್ಗ್ಗಡೆ ದಂಡ....
೨೪. ಬಣಯ್ಯಂಗಳ್ ರಾಯನಾರಾಯಣ ಪು....
೨೫. ಯು [ದ್ಯಾಪ] ನದಲು ಕೆಱೆಯ ಪುರದೊ......
೨೬. ಧರ್ಮ್ಮವಾಗಿ ಶ್ರೀ ಮತ್ರಿಭುವನಮ...
೨೭. ...ಲು ಧಾರಾಪೂರ್ವ್ವ......
೨೮. ....ಶ್ಯದಗ್ರ [ಹಾ]......

## ಎರಡನೆಯ ತುಂಡು

೨೯. .......ವಾಗಿರೆ ಪಡೆದ ಸಹಿ...
೩೦. ......ಕೊಣ್ಡಂಗುಳಿಯಲು ನಿಂಬ
೩೧. ...ಗಳ ಮಗ ಸ್ವಸ್ತಿ ಸಮಧಿಗತಪಞ್ಚ
೩೨. ಮಹಾಶಬ್ದ ಮಹಾಸಾಮನ್ತಾಧಿಪತಿ (ಮ)
೩೩. ಮಹಾಪ್ರಚಣ್ಡ ದಣ್ಡನಾಯಕ ದುಷ್ಟವಿದ್ವಿಷ್ಟ
೩೪. ವಿಧೇಯಕ ವಾಜಿಕುಳಾರ್ಣ್ಣವ ಪಾರಿಜಾತ
೩೫. ಸುಕವಿಶುಕಚೂತ ಬನ್ಧುವನ ವಸನ್ತ ವಚಶ್ರೀವಧೂ
೩೬. ಕಾನ್ತ ಸಾಹಿತ್ಯಸರೋರುಹ ಮಧುಬ್ರತ ಸತ್ಯಸ
೩೭. ತ್ಯಬ್ರತ ಹರಚರಣ ರಜೋರಂಜಿತೋತ್ತಮಾಂಗನ
೩೮. ಯ್ಯನಸಿಂಗ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ

ಶ್ರೀಮನ್ಮಹಾಪ್ರ

೩೯. ಧಾನಂ ಹೇರಿಲಾಳಸನ್ಧಿವಿಗ್ರಹಿ ದಣ್ಣನಾ[ಯ*] ಕಂ ಕೇಸಿರಾ

೪೦. ಜರಸರು ಶ್ರೀಮಚಾಳ್ಯ ವಿಕ್ರಮ ವರ್ಷದ ೩೩ನೆ

೪೧. ಯ ಸರ್ವ್ವಜಿತ್ ಸಂತ್ಸರದ ಮಾರ್ಗಸಿರದಮಾವಾಸ್ಯೆ

೪೨. ಸೋಮವಾರದಂದಿನ ಸೂರ್ಯ್ಯಗ್ರಹಣ ಪರ್ವ್ವ ನಿಮಿ ತ್ತದಲು

೪೩. ತಾವು ಮಾಡಿಸಿದ ಶಿವಾಲೆಯದ ಮೂಲಸ್ಥಾನದ

೪೪. ಶ್ರೀಸೋಮೇಶ್ವರದೇವರ್ಗ್ಗೆ ತಮ್ಮ ಪ್ರಭುತ್ವದ ದೋಣೆಯಂ

೪೫. ತೆಂಕ ಒಡ್ಡವಾಡಿಗೆಯ ಬಟ್ಟೆಯಿಂ ಪ

೪೬. ಡುವ ಬನ್ಧ ಚಿನ್ತಾಮಣಿಯ ಈರ್ಪ್ಪತ್ತೆಂಟು ಗೇಣು ಕೋ

೪೭. ಲಲು ತಮ್ಮಂ [ಶ]ಕ್ಕೆ ಬಂದ ಮತ್ತರಯ್ವ ತ್ತೇಳಜಿಳಗೊ*

ಕೊಂಡಗುಳಿ, ಸಿಂದಗಿ ತಾಲೂಕು, ವಿಜಾಪುರ ಜಿಲ್ಲೆ
ಕಲ್ಯಾಣ ಚಾಲುಕ್ಯ–ಭೂಲೋಕಮಲ್ಲ-ಸೋಮೇಶ್ವರ III, ಕ್ರಿ. ಶ. ೧೧೩೨

[EI. XXXVII iv. P. 189]

೧. ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ

೨. ಪ್ರಿಥ್ವೀವಲ್ಲಭ ಮಹಾರಾಜಾಧಿರಾಜ

೩. ಪರಮೇಶ್ವರ ಪರಮಭಟ್ಟಾರಕ ಸತ್ಯಾ

೪. ಶ್ರಯ ಕುಲತಿಲಕ ಚಾಲುಕ್ಯಾಭರ

೫. ಣ ಶ್ರೀ ಮಚ್ಚಾಲುಕ್ಯ ಭೂಲೋಕಮಲ್ಲದೇ
೬. ವರ ವಿಜಯರಾಜ್ಯಮುತ್ತರೋತ್ತರಾ
೭. ಭಿವೃದ್ಧಿ ಪ್ರವರ್ಧಮಾಣಮಾ ಚಂದ್ರಾ
೮. ರ್ಕ ತಾರಂಬರಂ ಸಲುತ್ತಮಿರೆ ಮಾಹುರ
೯. ದ ನೆಲೆವೀಡಿನೊಳು ಸುಖಸಂಕಥಾ
೧೦. ವಿನೋದದಿಂ ರಾಜ್ಯಂಗೆಯ್ಯುತ್ತಮಿರಲು
೧೧. ಶ್ರೀ ಮಚ್ಚಾಲುಕ್ಯ ಭೂಲೋಕಮಲ್ಲ ವರ್ಷದ ೭ನೆ
೧೨. ಯ ಪರಿಧಾವಿ ಸಂವತ್ಸರದ ಪುಷ್ಯದ
೧೩. ಪೌರ್ಣಮಾಸ್ಯೆ ಆದಿತ್ಯವಾರ[ರ]ದುತ್ತರಾ
೧೪. ಯಣ ಸಂಕ್ರಮಣ ಪರ್ವದಂದು ಶ್ರೀಮತ್ಸ
೧೫. ರ್ವ್ವನಮಸ್ಯದಗ್ರಹಾರಂ ಕೊಂಡಂಗು
೧೬. ಳ್ಯಸೇಷ ಮಹಾರಾಜನಂಗಲಿ[ಳಿ]ಗೆ
೧೭. ಶ್ರೀಮತ್ ಕೇಸಿಮಯ ದಂಡನಾಯಕರುಂ ಗ
೧೮. ಣಪತಿ ದಂಡನಾಯಕರು[ಂ]ಕೂಡಿ ವಿದ್ಯ[ದಾ]
೧೯. ನ ನಿಮಿತ್ತವಾಗಿ ಸೂತ್ರಸ[ಂಹಿ]ತ ಪಿರಿ
೨೦. ಯ ಗ್ರಂಥಂಗಲ[ಳ]ಂ ಪೇಳ್ವವುಪಾಧ್ಯಾಯರ್ಗೆ ಪೊಂಸ
೨೧. ವ್ರಿದ್ಧಿಯಲೆ ಗ್ರಾಸ ನಡವಂತಾಗಿ
೨೨. ಪೊಂಗೆ ತಿಂಗಲಿ[ಳಿ]ಂಗೆ ವೀಸಂ ನಾ
೨೩. ನಾಲ್ಕಱ ವಡ್ಡಿಯಲು ಕೊಟ್ಟ ವರ್ತಕ
೨೪. ಲೊಕ್ಕಿಗದ್ಯಾಣ ೨೦ ಮತ್ತ[ಂ]
೨೫. ಸಂಹಿತೆಯುಂ ಕಿ[ಱಿ]ಯ ಗ್ರಂಥಂಗ
೨೬. ಲು[ಳು]ಂ ಯಾಜ್ಞ್ಯವಲ್ಕಿ ಸಹಿತ ಪೇಳ್ವ (ವ)
೨೭. ಉಪಾಧ್ಯಾಯರ್ಗೆ ಪೊಂನ ಪಿ(ವ್ರಿ)ದ್ಧಿಯ

೨೮. ಲೆ ಗ್ರಾಸ ನಡವಂತಾಗಿ ಪೊಂ
೨೯. ಗೆ ತಿಂಗಲಿ(ಳಿ)ಂಗೆ ವೀಸಂ ನಾಲ್ಕ
೩೦. ರ ವೃದ್ಧಿಯುಂ ಕೊಟ್ಟ ವರ್ತಕ ಲೊ
೩೧. ಕ್ಕಿಗದ್ಯಾಣ ೨೦ ಮತ್ತ ವೃಕ್ಷ
೩೨. ರ ವ್ಯಾಕರಣ ರೂಪಾವತಾರ ವಿಂ
೩೩. ತಿನಿತುಂ ಪೇರ್ದ ವಾ(ಬಾ)ಲ ಶಿಕ್ಷೆ
೩೪. ಯುಂ ಮಾರ್ಪ ಉಪಾಧ್ಯಾಯರ್ಗೆ ಪೊಂ
೩೫. ನ ವೃದ್ಧಿಯುಲೆ ಗ್ರಾಸಂ ನಡವಂ
೩೬. ತಾಗಿ ಪೊಂಗೆ ತಿಂಗಲಿ(ಳಿ)ಂಗೆ
೩೭. ವೀಸಂ ನಾಲ್ಕ[ಱ] ವೃದ್ಧಿಯುಂ ಕೊ
೩೮. ಟ್ಟ ವರ್ತಕ ಲೊಕ್ಕಿಗದ್ಯಾ
೩೯. ಣ ೨೦ ಈ ಧರ್ಮವಂ ಮಹಾಜ
೪೦. ನಂಗಲು(ಳುಂ) ನಡಸುವರು॥
೪೧. ಶ್ರೀಮತು ಭಾಂಡಾರಿಗೆ ರಾಮದೇ
೪೨. ವ ನಾಯಕರು ಸೌಪರ್ಣ
೪೩. ದ ತಾಂಬೂಲ ದಾನಕ್ಕೊ(ಕ್ಕೆ) ಪೊಂ(ಗೆ)
೪೪. ತಿಂಗಲಿ(ಳಿ)ಂಗೆ ವೀಸಂ ೪[ಱ] ವೃ[ದ್ಧಿ]
೪೫. ಯುಲು ಕೊಟ್ಟ ಕಟಕ ಪ್ರಿಯ
೪೬. ಗದ್ಯಾಣ ೧೦ ಮತ್ತಂ ಬ್ರಹ್ಮದೇ
೪೭. ವ ಭಟ್ಟರು ತಾಂಬೂಲ ದಾನ
೪೮. ವೃದ್ಧಿಯುಲೆ ಕೊಟ್ಟ ಕಟಕಂ ಗ
೪೯. ದ್ಯಾಣ ೨ ಶ್ರೀ ಮತ್ಸರ್ವನಮ
೫೦. ಸ್ಯದಗ್ರಹಾರ ಕೊಂಡಂಗುಲಿ(ಳಿ)ಯ
೫೧. ಶೇಷ ಮಹಾಜನಂಗಲು(ಳು) ಶ್ರೀ

೫೨. ಕೇಶವ ದೇವರ್ಗೆ ದೀಪದಾ
೫೩. ನವಾಗಿ ಗಾಣವಾಯಿಲೆಯು
೫೪. ಲ್ಲಿ ದೇವಸ(ದ)ಲು ಸೊಲ್ಲಗೆ
೫೫. ಯೆಣ್ಣೆಯಂ ಕೊಟ್ಟರು ಮತ್ತಂ ಪು
೫೬. ಷ್ಪ ದಾನವಾಗಿಯಂರೆವತ್ತರು
೫೭. ತೋಂಟಮಂ ಕೊಟ್ಟರು

ಅಬ್ಬಲೂರು, ಹಿರೇಕೆರೂರ ತಾಲೂಕ, ಧಾರವಾಡ ಜಿಲ್ಲೆ
ಕಲಚುರಿ-ಬಿಜ್ಜಳ, ಚಾಲುಕ್ಯ ಸೋಮೇಶ್ವರ IV
(ಕ್ರಿ. ಶ. ೧೨೦೦ ?)

( EI. V. PP 245-252 )

೨೨.......॥ವೃ। ಓಹಿಲದಾಸಿ(ಸ) ಚೆಂನ ಸಿರಿಯಾಳ
ಹಳಾಯುಧ
ಬಾಣನುದ್ಭಟರ್ದೇಹದೊಳೊಂದಿ ಬಂದ ಮಳೆಯೇಶ್ವರ
ಕೇಶವರಾಜರಾದಿಯಾಗೈಹಿ
೨೩. ಕ ಸೌಖ್ಯಮಂ ಬಿಸುಟ ಸಂಖ್ಯಗಣಂ ನಿಜವಾದ
ಭಕ್ತಿಸದ್ಗೇಹದೊಳಿಲ್ಲಿರಲು
ಸಮಯಮುತ್ಕಟವಾದುವು(ದು) ಜೈನಬೌದ್ಧರೊಳ(ಳ್) ॥

ಮರಡಿಪುರ, ಮಂಡ್ಯ ತಾಲೂಕು, ಮಂಡ್ಯ ಜಿಲ್ಲೆ
ಹೊಯ್ಸಳ-ವೀರಬಲ್ಲಾಳ III (ಕ್ರಿ. ಶ. ೧೩೦೫ ?)
(E.C. III-i ಮಂಡ್ಯ ೮೩, ಮರಡಿಪುರ)

೧೭..........ಮಾರ್ತ್ಯಲೋಕದ ಗಣಂಗಪ ಸ್ರಿರಿಯಾಳುವ
ದಾಸದಸವ

೧೮. ಮ್ಮ್ರ್ಗದಿಹಿಲ ಉದ್ಭಟ ನಂಬಿ ಕುಂಬಾಱಗುಂಡ
ಆಂಡವಲ ಕರಿಕಾಲಚೋಳ ಭೋಗದೇವ ಬಾಣ ಮ

೧೯. ಯೂರ ಕಾಳಿದಾಸ ಕೇಶಿರಾಜ ದಣ್ನಾಯಕ ಸುರಿಗೆಯ
ಚೆಲ್ವಡರಾಯ ಸಂಗನ ಬಸವಯ್ಯ ಲಿನಿಮಿತಿ

೨೦. ಕೇಸವರಾಜ ಜಗದೇವ ದಣ್ನಾಯಕ ಏಕಾನ್ತದರಾಮಯ್ಯ
ಸೊನಲಿಗೆಯ ರಾಮಯ್ಯ ಹುಲಿಗೆಱೆಯ ಪೊ

೨೧, ನ್ನಯ ನೆಲುವಿಗೆಯ ಸಾಂತಯ್ಯ ಸಕಳಗಣ ಪರಿವೇಷ್ಟಿತ
ಶ್ರೀ ಕಲಿದೇವರ ಪ್ರಸಸ್ತಿ ಮಂಗಳಂ ॥

## ಒಪ್ಪೋಲೆ

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ೨೦ | ೮ | ದುರಾಬಾರದಿಂ | ದುರಾಚಾರದಿಂ |
| ೨೮ | ೧೮ | ಸೆರೆಯಿಟಪಳೋ | ಸೆರೆಯಿಟ್ಟಪಳೋ |
| ೩೦ | ೧೨ | ಜೋತಿಗಯ್ಯಾ | ಜ್ಯೋತಿಗಯ್ಯಾ |
| ೩೫ | ೨೧ | ಮಹಾಱಿದಾ | ಮಾಱಿದಾ |

## ಉಪನ್ಯಾಸ ಗ್ರಂಥಮಾಲೆಯ
## ಕೆಲವು ಪ್ರಕಟನೆಗಳು

---

೧. ಶರಣರ ಆರ್ಥಿಕ ಚಿಂತನೆ

—ಬಿ. ಎ. ಪಾಟೀಲ

೨. ಮೈಲಾರ ಬಸವಲಿಂಗ ಶರಣರು

—ದೇವೇಂದ್ರಕುಮಾರ ಹಕಾರಿ

೩. ಶ್ರೀ ನಿಜಗುಣ ಶಿವಯೋಗಿಗಳ ಭಕ್ತಿ, ಜ್ಞಾನ, ವೈರಾಗ್ಯ

—ಪಿ. ಎಂ. ಸಿದ್ಧಯ್ಯ

೪. ಹರಿಹರನ ಮೂರು ರಗಳೆಗಳು

—ಎಂ. ಎಸ್. ಲಠ್ಠೆ

೫. ಬಸವಣ್ಣನವರು ಕಟ್ಟಬಯಸಿದ ಸಮಾಜ

—ಸಂಗಣ್ಣ ಕುಪ್ಪಸ್ತ

೬. ವಚನಕಾರ ದೇವರದಾಸಿಮಯ್ಯ

—ಎಸ್. ಎಸ್. ಬಾಣದ

೭. ಲಕ್ಕಣ್ಣ ದಂಡೇಶ

—ವ್ಹಿ. ಶಿವಾನಂದ

೮. ವಚನಕಾರ ಮಡಿವಾಳ ಮಾಚಿದೇವರು

—ಎಸ್. ಕೆ. ಕೊಪ್ಪ

೯. ಅಕ್ಕಮಹಾದೇವಿ ಮತ್ತು ಮೀರಾಬಾಯಿ

—ಎಸ್. ಎಸ್. ಕಬ್ಬಿನ

೧೦. ನಗೆಗಾರ ನಯಸೇನ

—ಎಂ. ಎಸ್. ಸುಂಕಾಪುರ

---

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ